ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 8, ಕೊಯಿಲು 1, ಜನವರಿ - ಏಪ್ರಿಲ್, 2002

ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

"ನಾಟಿ ಬೀಜಗಳ ರಕ್ಷಣೆ-ಈಗ ನಮ್ಮ ಜವಾಬ್ದಾರಿ"



ನಯಾಕೃಷಿ ಆಂದೋಲನದ ಓರ್ವ ಮಹಿಳೆ

ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನೀ ಬೀ ಬಳಗ

Honey Bee (English)
Prof. Anil K.Gupta, Indian Institute of Management,
Vastrapur, Ahmedabad - 380 015
Ph: 79-6307241, email: anilg@nifindia.org, honeybee@sristi.org

Abeja (Spanish)
Mario Mejia Gutierrez, Carrera 43 No.10-50 Apto.502
Telefono: 3368531 Cali, Valle, Colombia

Chayan (Bengali)
Dr.D.K.Bagchi, Head, Agricultural Science Unit, Indian Statistical Institute, 203, Barrackpore Trunk Road, Calcutta - 700035

Loksarvani (Gujarati)
Dilip Koradiya, SRISTI P.O.Box 15050
Ahmedabad, Gujarat - 380015

Makhir (Pahari)
Dr.A.Chandan, ERA, Khundian
District Kangra, Himachal Pradesh - 176030

Num Vali Velanmai (Tamil)
P. Vivekanandan, 45, TPM Nagar
Virattipathu, Tamil Nadu - 625010

Sujh-Bujh Aas Paas Ki (Hindi)
Shalini Sharma, H-12 ODS Flats Lajpat Nagar 4
New Delhi - 110024

Tenetiga (Telugu)
Prof.(Mrs.) P. Geervani, 201, Dream Apartment, Road No.3
Banjara Hills, Hyderabad, Andra Pradesh - 500 034

ಸಂಪಾದಕೀಯ

ಕಳೆದ ಫೆಬ್ರವರಿಯಲ್ಲಿ ಆಫ್ರಿಕಾದಲ್ಲಿ ಜರುಗಿದ "ಸೂಕ್ತ ತಂತ್ರಜ್ಞಾನ ಮತ್ತು ಅನುಶೋಧನೆ" ಬಗೆಗಿನ ಒಂದು ಸಮ್ಮೇಳನದಲ್ಲಿ 'ಹನೀ ಬೀ ಜಾಲ' ಮತ್ತು ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನದ ಪ್ರಯತ್ನಗಳನ್ನು ಆಫ್ರಿಕಾ ಖಂಡದ ವಿವಿಧ ದೇಶಗಳ ಪ್ರತಿನಿಧಿಗಳು ವಿಶೇಷ ಆಸಕ್ತಿಯಿಂದ ಗಮನಿಸಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ. ಆಫ್ರಿಕಾ ಖಂಡಕ್ಕೆ ಸಂಬಂಧಿಸಿದಂತೆ ಒಂದು ಅನುಶೋಧನೆ ಪ್ರತಿಷ್ಠಾನ ಬೇಕು ಹಾಗೇ ನಮ್ಮ "ಹನೀ ಬೀ ಜಾಲ"ದ ಜೊತೆ ಆಫ್ರಿಕಾದ ದೇಶಗಳು ನಿಕಟ ಸಂಬಂಧ ಹೊಂದುವಂತಾಗಬೇಕೆಂಬ ಅಭಿಪ್ರಾಯ ಎಲ್ಲರಿಂದ ಕೇಳಿ ಬಂದಿರುತ್ತದೆ. "ಹನೀ ಬೀ ಜಾಲ" ಮತ್ತು ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ ಒಟ್ಟಾಗಿ ಹೊರ ತರಲು ಪ್ರಯತ್ನಿಸುತ್ತಿರುವ ಅನುಶೋಧನೆಗಳ ರಾಷ್ಟ್ರೀಯ ಮಟ್ಟದ ದಾಖಲು ಪಟ್ಟಿ (Registry) ರೀತಿಯಲ್ಲೇ ಆಫ್ರಿಕಾದ ವಿವಿಧ ದೇಶಗಳಲ್ಲಾಗುತ್ತಿರುವ ಅನುಶೋಧನೆಗಳ ದಾಖಲು ಪಟ್ಟಿ ತಯಾರು ಮಾಡಬೇಕು. ಈ ಮೂಲಕ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ತರಗಳಲ್ಲಿ ಸಾಮ್ಯತೆ ಹೊಂದಿರುವ ಆಫ್ರಿಕಾ ಖಂಡ ಮತ್ತು ಭಾರತ ಉಪಖಂಡಗಳ ನಡುವೆ ಅತ್ಯಂತ ಸೂಕ್ತ ರೀತಿಯ ತಂತ್ರಜ್ಞಾನ ವಿನಿಮಯ ಮಾತ್ರವಲ್ಲ ಆ ಮೂಲಕ ತೃತೀಯ ಜಗತ್ತಿನ ಬಾಂಧವ್ಯ ಗಟ್ಟಿಗೊಳ್ಳಲು ವೇದಿಕೆಯೊಂದನ್ನು ನಿರ್ಮಾಣ ಮಾಡಬಹುದು ಎಂಬ ಮಹದಾಸೆಗೆ ಬೀಜ ಬಿತ್ತುವಂತೆ ಮಾಡಲು ಈ ಸಮ್ಮೇಳನದಲ್ಲಿ ಪ್ರಯತ್ನ ನಡೆಸಲಾಗಿರುತ್ತದೆ.

ಈ ಆಫ್ರಿಕಾ ಭೇಟಿಯ ಕೆಲ ದಿನಗಳಲ್ಲೇ ಬಾಂಗ್ಲಾದ ಜೀವ ವೈವಿಧ್ಯದ ಮೇಲಿನ ಉಪಖಂಡ ಮಟ್ಟದ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ದೊರೆತಿರುತ್ತದೆ. ಅಲ್ಲಿ ಡಾ. ಫರಹದ್ ಅಹ್ಮದ್ ನಡೆಸುತ್ತಿರುವ ಆ ಅನನ್ಯ **"ನಯಾ ಕೃಷಿ ಆಂದೋಲನ"**ದ ಬಗ್ಗೆ ವಿವರವಾದ ಲೇಖನ ಕೊಡಲಾಗಿದೆ. ಪರಿಸರ, ಜೀವ ವೈವಿಧ್ಯ ಮತ್ತು ಸಂಸ್ಕೃತಿ ವಿಚಾರಗಳನ್ನು ಮೂಲವಾಗಿಟ್ಟುಕೊಂಡು ಸ್ಥಳೀಯ ಮಟ್ಟದಲ್ಲಿ ಗಟ್ಟಿಯಾದ ಚಳುವಳಿಯನ್ನು ಕಟ್ಟುತ್ತಾ ಹೇಗೆ ದೇಶವ್ಯಾಪಿಯಾಗಬಹುದೆನ್ನುವುದನ್ನು ಡಾ. ಫರಹದ್ ಎತ್ತಿ ತೋರಿಸಿರುವರು. **"ವೈಯಕ್ತಿಕ ಮಟ್ಟದಲ್ಲೊಂದು ಅರ್ಥಪೂರ್ಣ ಬದುಕು ಸಾಮೂಹಿಕ ಮಟ್ಟದಲ್ಲಿ ಆನಂದ ಖಂಡಿತಾ ಸಾಧ್ಯ"** ಎನ್ನುವ ಖಚಿತ-ನುಡಿ, ಅವರ ವ್ಯಕ್ತಿತ್ವ, ಆದರ್ಶ ಮತ್ತು ಸಾಧನೆಗಳಿಗೆ ಕನ್ನಡಿ ಹಿಡಿದಿದೆ.

ತೃತೀಯ ಜಗತ್ತಿಗೇ ಹೇಳಿ ಮಾಡಿಸಿದಂತಿರುವ ಈ ಪ್ರಯತ್ನ ನಮ್ಮ ಉಪಖಂಡದಲ್ಲಿ ಸಾರ್ಕ್ (SAARC) ದೇಶಗಳ ಮಟ್ಟದಲ್ಲಿ ಒಟ್ಟಾಗಿ ಪ್ರಯತ್ನಿಸಲು ಅತ್ಯಂತಾ ಯೋಗ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ, ಫರಹದ್ ನೇತೃತ್ವದ "ಆಹಾರ, ಪರಿಸರ ಮತ್ತು ಸಂಸ್ಕೃತಿಗಳಿಗಾಗಿ ದಕ್ಷಿಣ ಏಷ್ಯಾದ ಜಾಲ" (The South Asian Network on Food, Ecology and Culture) ಒಂದು "ಕಾಳಜಿಗಳ ಹೇಳಿಕೆ" (Statement of Concern) ಹೊರ ತಂದಿದ್ದು ಅದು ಗಂಭೀರ ಚಿಂತನೆಗೆ ಎಡೆ ಮಾಡಿಕೊಡಲಿದೆ.

ಮುಂದುವರಿದಿದೆ............

ಹಿತ್ತಲ ಗಿಡದ ಪೋಷಣೆಗೆ ಸಹಾಯ:

SRISTI (Society for Research and Initiatives for Sustainable Technologies and Institutions)

ಮತ್ತು

The National Innovation Foundation, India
Indian Institute of Management, Vastrapur, Ahmedabad - 380 015

ತಳಮಟ್ಟದಿಂದ ಭೂಮಂಡಲದವರೆಗೆ

- ಪ್ರೊ. ಗುಪ್ತಾರ ಹೆಜ್ಜೆಯಕೆ



ವಿಶ್ವ ಅನುಶೋಧನಾ ಪ್ರತಿಷ್ಠಾನ

ಡಾ. ಫರಹದ್ ನೇತೃತ್ವದ ಆ ನಯಾ ಕೃಷಿ ಪ್ರಯತ್ನಕ್ಕೂ ನಮ್ಮ ಪ್ರೊ. ಅನಿಲ್ ಗುಪ್ತಾ ನೇತೃತ್ವದಲ್ಲಿ ಇಲ್ಲಿ ನಡೆಯುತ್ತಿರುವ ಹನೀ ಬೀ ಪ್ರಯತ್ನಕ್ಕೂ ಮೂಲಭೂತ ಸ್ತರಗಳಲ್ಲಿ ವ್ಯತ್ಯಾಸವಿರುತ್ತದೆ. ಜೀವ ವಿವಿಧತೆಯನ್ನು ಸಾಂಸ್ಕೃತಿಕ ನೆಲೆಯಿಂದ ನೋಡುವ ಡಾ. ಫರಹದ್ ಪರ್ಯಾಯ ಬದುಕಿನ ರೀತಿಯತ್ತ ತಮ್ಮ ಪ್ರಯತ್ನವನ್ನು ಮುಂದುವರೆಸಿರುತ್ತಾರೆ. ಆದರೆ ಪ್ರೊ. ಗುಪ್ತಾ ಜೀವ ವಿವಿಧತೆಯನ್ನು ವಾಸ್ತವಿಕ ನೆಲೆಯಿಂದ ನೋಡುತ್ತಾರೆ. ವಾಣಿಜ್ಯಗೊಳಿಸಿ ಆ ಮೂಲಕ ಅದನ್ನು ಉಳಿಸಿ ಬೆಳೆಸುತ್ತಿರುವ ಬಡ ಜನತೆಗೆ ಜೀವನ ಭದ್ರತೆ ದೊರಕಿಸುವ ಸಾಧ್ಯತೆಯನ್ನು ಮುಂದಿಟ್ಟಿರುವರು. ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಪ್ರೊ. ಗುಪ್ತ 'ಭೌದ್ಧಿಕ ಆಸ್ತಿಯ ಹಕ್ಕಿನ' ವಿಚಾರಕ್ಕೂ ಕೈ ಹಾಕಿ, ಇಡೀ ಜಾಗತೀಕರಣ ಪ್ರಕ್ರಿಯೆಯೊಡನೆ ಅನುಸಂಧಾನದ ಪ್ರಸ್ತಾಪಕ್ಕಿಳಿದಿರುವರು. ಆದರೆ ಸಂಸ್ಕೃತಿ, ಆಧ್ಯಾತ್ಮಿಕತೆಗಳ ಮೂಲಕ 'ಸಾಮೂಹಿಕ ಮಟ್ಟದ ಆಹ್ಲಾದ ಮತ್ತು ಆನಂದ'ದ ವಿಚಾರಕ್ಕಿಳಿದಿರುವ ಡಾ. ಫರಹದ್‌ರ ನಿಲುವನ್ನು ಪ್ರೊ. ಗುಪ್ತಾರ ಧೋರಣೆಗೆ ಹೋಲಿಸಿ ನೋಡುವುದು ಕಷ್ಟಸಾಧ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಡಾ. ಫರಹದ್ ಧೋರಣೆಗೂ ನಮ್ಮ ರೈತ ನಾಯಕರಾದ ಪ್ರೊ. ನಂಜುಂಡಸ್ವಾಮಿ ಮತ್ತು ಪರಿಸರವಾದಿ ಡಾ. ವಂದನಾಶಿವರ ಧೋರಣೆಗಳಿಗೂ ಹೋಲಿಕೆ ಇದ್ದರೂ ಜಾಗತೀಕರಣದ ವಿಚಾರದಲ್ಲಿ ಇವರ ರೀತಿ ಫರಹದ್‌ರು ತೀವ್ರ ಪ್ರತಿರೋಧ, ಮತ್ತು ತಿರಸ್ಕಾರದ ದಾರಿಗಿಳಿಯುತ್ತಿಲ್ಲ. ರಚನಾತ್ಮಕತೆಯ ಮೂಲಕ ಜಾಗತೀಕರಣಕ್ಕೆ ತೀವ್ರ ಪ್ರತಿರೋಧ ಒಡ್ಡುವ ತಂತ್ರ ಡಾ. ಫರಹದ್‌ರವರ ಪ್ರಯತ್ನದಲ್ಲಿ ಅಡಗಿರುತ್ತದೆ.

> ***ಹೀಗೆ ಜೀವ ವೈವಿಧ್ಯ ಮತ್ತು ದೇಶೀಯ ಜ್ಞಾನದಂತಹಾ ನಮ್ಮ ಅಮೂಲ್ಯ ಸಂಪತ್ತುಗಳ ವಿಚಾರದಲ್ಲಿ ಈ ರೀತಿಯ ಧೋರಣಾ ವೈವಿಧ್ಯಗಳು 'ಹಿತ್ತಲ ಗಿಡ' ಮಟ್ಟಕ್ಕಂತೂ ಅತ್ಯಂತ ಮಹತ್ವದ್ದಾಗಿರುತ್ತದೆ. ಇದು ಗಂಭೀರವಾಗಿ ಪರಿಶೀಲಿಸಲು ಯೋಗ್ಯವಾಗಿರುವುದು ಮಾತ್ರವಲ್ಲ ಈ ನಿಟ್ಟಿನಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲೂ ಉಪಯುಕ್ತವಾಗಿರುತ್ತದೆ.***

ಪ್ರೊ. ಗುಪ್ತಾರ ನೇತೃತ್ವದ 'ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ' ದಿಂದ ತಳಮಟ್ಟದ ಶೋಧನೆಗಳ ಹುಡುಕಾಟದ ಕಾರ್ಯ ತೀವ್ರವಾಗಿ ನಡೆಯುತ್ತಿದೆ. ಪ್ರಥಮ ವರ್ಷದ ಸ್ಪರ್ಧೆಗೆ ಸುಮಾರು ಸಾವಿರ ಅನುಶೋಧನೆಗಳು ದಾಖಲಾಗಿದ್ದರೆ, ದ್ವಿತೀಯ ವರ್ಷದ ಗುರಿ 10 ಸಾವಿರಕ್ಕೇರಿದೆ. ಈ ಪ್ರಯತ್ನವನ್ನು ಗುರುತಿಸಿ ಶ್ಲಾಘಿಸಿದ ನಮ್ಮ ಕೇಂದ್ರ ಸರ್ಕಾರ ಈ ಸಾಲಿನ ಆಯ ವ್ಯಯದಲ್ಲಿ ಈ ಅನುಶೋಧನೆಗಳನ್ನು ವಾಣಿಜ್ಯಕರಣಗೊಳಿಸಲು ಒಂದು "ಚಿಕ್ಕ ಸಾಹಸ ಬಂಡವಾಳ ನಿಧಿ" (Micro Venture Capital Fund) ಸ್ಥಾಪನೆಯ ವಿಚಾರ ತಿಳಿಸಿರುತ್ತದೆ. ಇದು ನಮ್ಮ ಹನೀ ಬೀ ಪ್ರಯತ್ನಕ್ಕೆ ದೊರೆತಿರುವ ಅತ್ಯಂತ ಮಹತ್ವದ ಸಾಂಸ್ಥಿಕ ರೂಪದ ಸರ್ಕಾರಿ ಮನ್ನಣೆಯಾಗಿರುತ್ತದೆ.

ಇವೆಲ್ಲವುಗಳಿಂದ ಪುಳಕಿತಗೊಂಡಿರುವ ನಮ್ಮ ಪ್ರೊ. ಗುಪ್ತಾರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಆಫ್ರಿಕಾ ಮಟ್ಟದಿಂದ ಹಿಡಿದು ಕಾಮನ್ ವೆಲ್ತ್ ದೇಶಗಳು ಅಷ್ಟೇಕೆ ಜಾಗತಿಕ ಮಟ್ಟದವರೆಗಿನ ಅನುಶೋಧನೆ ಪ್ರತಿಷ್ಠಾನಗಳನ್ನು ಹುಟ್ಟು ಹಾಕುವತ್ತ ಕೈಚಾಚಿರುವರು. ಆದರೆ ಇನ್ನೊಂದೆಡೆ, ಇದರಿಂದ ನಮ್ಮ 'ಹನೀಬೀ ಜಾಲ'ದ ಉದ್ದೇಶವೇ ಮೂಲೆ ಗುಂಪಾಗಬಹುದೇನೋ ಹಾಗೇ ಈ ರೀತಿ ದಾಖಲುಗೊಳ್ಳುತ್ತಿರುವ ತಳಮಟ್ಟದ ಅನುಶೋಧನೆಗಳು ಎಲ್ಲಿ ಅನ್ಯರ ವರವಾಗಿ ದುರುಪಯೋಗಕ್ಕೆ ಒಳಗಾಗಬಹುದೇನೋ ಎಂಬ ಆತಂಕಕ್ಕೂ ಆಸ್ಪದ ನೀಡಿರುತ್ತದೆ. ಈ ವಿಚಾರವಾಗಿ ಕಳೆದ ಫೆಬ್ರವರಿಯಲ್ಲಿ ಅಹಮದಾಬಾದಿನಲ್ಲಿ ಜರುಗಿದ ಹನೀಬೀ ಬಳಗದ ಸಭೆಯಲ್ಲಿ ಗಂಭೀರ ಚರ್ಚೆಯೂ ನಡೆದಿರುತ್ತದೆ. ಈ ನಿಟ್ಟಿನಲ್ಲಿ ಮುಂದಿನ ಸ್ಪರ್ಧೆಗೆ ಪರಿಗಣಿಸುವ ಅನುಶೋಧನೆಗಳನ್ನು ಆ ಅನುಶೋಧಕರಿಂದ "ಪೂರ್ವ ಸೂಚಿತ ಸಮ್ಮತಿ" (Prior Informed Consent) ಪಡೆದ ನಂತರವೇ ರಾಷ್ಟ್ರೀಯ ದಾಖಲು ಪಟ್ಟಿಯಲ್ಲಿ ಸೇರಿಸಬೇಕೆಂಬ ತೀರ್ಮಾನಕ್ಕೆ ಬರಲಾಗಿದೆ. ಈ ಅನುಶೋಧನೆಗಳನ್ನು ವ್ಯವಸ್ಥಿತಗೊಳಿಸಲು, ವಾಣಿಜ್ಯಗೊಳಿಸಲು ತೃತೀಯ ವ್ಯಕ್ತಿ, ಸಂಸ್ಥೆಗಳಿಗೆ ಹಸ್ತಾಂತರಿಸಲು ಮತ್ತು ಈ ಮೂಲಕ ಬರಬಹುದಾಗಿರುವ ಲಾಭಾಂಶವನ್ನು ಹಂಚಿಕೊಳ್ಳುವ ಬಗೆಯನ್ನು ತಳಮಟ್ಟದ ಅನುಶೋಧಕರ ಮುಂದಿಟ್ಟು ಅವರ ಸಮ್ಮತಿಯನ್ನು ಕೇಳಲು ಉದ್ದೇಶಿಸಲಾಗಿದೆ. ಇದರಿಂದ, ಈ ನಿಟ್ಟಿನಲ್ಲಿ ಎದ್ದಿರುವ ಆತಂಕ ಶಮನಗೊಳ್ಳುವ ಸಾಧ್ಯತೆಯಿರುತ್ತದೆ. ಇದು ಕಾನೂನಿನ ವಿಚಾರಕ್ಕಿಂತ ಅನುಶೋಧಕರಿಗೆ ಅವರ ಅನುಶೋಧನೆಯ ಮೇಲಿನ ನ್ಯಾಯಬದ್ಧ ಹಕ್ಕನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ, ಕನಿಷ್ಠ ಆ ಬಗ್ಗೆ ಸೂಕ್ತ ಮಾಹಿತಿ ಒದಗಿಸಿ ಅವರ ಸಮ್ಮತಿ ಪಡೆಯುವ ನೈತಿಕ ವಿಚಾರವಾಗಿರುತ್ತದೆ.

ಈ ರೀತಿಯಾದ ಭರವಸೆ, ಆತಂಕ, ದ್ವಂದ್ವ ಮತ್ತು ಪ್ರೋತ್ಸಾಹಗಳೆಲ್ಲವನ್ನು ಅರಗಿಸಿಕೊಳ್ಳುವುದು 'ಹಿತ್ತಲ ಗಿಡ'ಕ್ಕೆ ಸ್ವಲ್ಪ ಪ್ರಯಾಸದ ವಿಚಾರವಾಗಿರುತ್ತದೆ. ಆದರೆ ತನ್ನ ಬೇರನ್ನು ಗಟ್ಟಿಯಾಗಿ ಆಳಕ್ಕಿಳಿಸಿ, ಸ್ವತಂತ್ರವಾಗಿ ಬೆಳೆಯಬೇಕೆನ್ನುವ ವಿಚಾರದಲ್ಲಿ ಎರಡು ಅಭಿಪ್ರಾಯವಿರದು. ಈ ಕಾರ್ಯ ನಾವು ತ್ವರಿತವಾಗಿ ಕೈಗೆತ್ತುಕೊಳ್ಳಬೇಕಾಗಿದೆ.

ಡಾ. ಟಿ. ಎನ್. ಪ್ರಕಾಶ್ ಕಮ್ಮರಡಿ

ಬಾಂಗ್ಲಾದೇಶದ "ನಯಾ ಕೃಷಿ ಆಂದೋಲನ" - ತೃತೀಯ ಜಗತ್ತಿಗೊಂದು ಸೂಕ್ತ ಮಾದರಿ

- ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

"ಆಹ್ಲಾದಕರ ಪರಿಸರದಲ್ಲಿ ಆರೋಗ್ಯಕರ, ಸತ್ವಪೂರ್ಣ ಆಹಾರವನ್ನು ಉತ್ಪಾದಿಸುತ್ತಾ ಆ ಮೂಲಕ ಅರ್ಥಪೂರ್ಣವೂ ಆನಂದಮಯವೂ ಆದಂತಹ ಬದುಕನ್ನು ನಡೆಸುವುದೇ ಬೇಸಾಯದ ಮೂಲ ಉದ್ದೇಶ. ಈ ರೀತಿಯ ಆನಂದಾನುಭವವು ವ್ಯಕ್ತಿಯ ಬದುಕಿನ ಗುರಿ ಮತ್ತು ದಾರಿಗಳೆರಡೂ ಹೌದು. ಈ ಆನಂದ ವ್ಯಕ್ತಿಯೋರ್ವ ತನ್ನ ವೈಯಕ್ತಿಕ ಮಟ್ಟದಲ್ಲಿ ಪಡೆಯಬಹುದಾಗಿರುವ ಸಹಜವೂ ಜೀವಂತವೂ ಆದ ಅನುಭವವಾಗಿರುತ್ತದೆ. ಈ ಆನಂದ ಬರಿದೇ ಭೌತಿಕ ಜಗತ್ತಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಪ್ರಾಕೃತಿಕ ಮಿಗಿಲಾಗಿ ಸಾಂಸ್ಕೃತಿಕ, ಆಧ್ಯಾತ್ಮಿಕ ಜಗತ್ತುಗಳ ಮೇಲೂ ಅಷ್ಟೇ ಅವಲಂಬಿತವಾಗಿರುತ್ತದೆ. ವ್ಯಕ್ತಿ ಸಮುದಾಯದ ಒಂದು ಅವಿಭಾಜ್ಯ ಅಂಗವಾಗಿರುವುದರಿಂದ ಅವುಗಳನ್ನು ಹೊರತುಪಡಿಸಿ ಆತ ಈ ಆನಂದವನ್ನು ವೈಯುಕ್ತಿಕವಾಗಿ ಪಡೆಯುವುದು ಸಾಧ್ಯವಿಲ್ಲ. ಹೀಗೆ, ಗುರಿ ಮತ್ತು ದಾರಿ, ವೈಯಕ್ತಿಕ ಮತ್ತು ಸಾಂಘಿಕ, ಭೌತಿಕ ಮತ್ತು ಸಾಂಸ್ಕೃತಿಕ, ಆರ್ಥಿಕ ಮತ್ತು ಪ್ರಾಕೃತಿಕ ಮಟ್ಟಗಳ ದ್ವಂದ್ವಗಳೆಲ್ಲಾ ಕರಗಿ ಅವುಗಳು ಒಂದಕ್ಕೊಂದು ಪೂರಕವಾಗುತ್ತಾ ಒಗ್ಗೂಡುವ ಸಹಜ ಸಾಧ್ಯತೆಗಳಿರುವುದು ಬೇಸಾಯದಲ್ಲಿ ಮಾತ್ರ - ಇದೇ ಕೃಷಿಯ ವ್ಯಾಖ್ಯೆ".

ಈ ಮೇಲಿನ ಮಾತುಗಳು ಯಾವುದೇ ದಾರ್ಶನಿಕನು ಹೇಳಿರುವಂತಹುದಲ್ಲ. ತತ್ವಶಾಸ್ತ್ರದ ಗ್ರಂಥ ಒಂದರಿಂದ ಪಡೆದಿರುವಂತಹುದ್ದಲ್ಲ. ಇವುಗಳು ನಮ್ಮ ಉಪಖಂಡ ಅಷ್ಟೇಕೆ ಇಡೀ ತೃತೀಯ ಜಗತ್ತಿನ ಕಣ್ಣು ತೆರೆಸಿ ಮಾದರಿಯಾಗಬಹುದಾಗಿರುವ ಬಾಂಗ್ಲಾದೇಶದ ಒಂದು ಅನನ್ಯ ರೈತ ಚಳುವಳಿ - 'ನಯಾ (ಹೊಸ) ಕೃಷಿ' ಆಂದೋಲನ ಹಿಡಿದಿಟ್ಟುಕೊಂಡಿರುವ ಉದ್ದೇಶಗಳ ಸಾರಾಂಶವಾಗಿರುತ್ತದೆ.

ಬಾಂಗ್ಲಾದೇಶದ ರಾಜಧಾನಿ ಡಾಕಾ ನಗರದಿಂದ ಸುಮಾರು 150 ಕಿ.ಮೀ. ದೂರದ ತಂಗೈಲ್ ಜಿಲ್ಲೆಯ ಬಿಷ್ನುಪುರ ಹಳ್ಳಿ ಈ ನಯಾಕೃಷಿ ಆಂದೋಲನದ ಮೂಲ ಕೇಂದ್ರವಾಗಿರುತ್ತದೆ. ಸುತ್ತಮುತ್ತಲಿನ ಹತ್ತಾರು ಹಳ್ಳಿಯ ಸಾವಿರಾರು ರೈತರು ಮತ್ತು ನೇಯ್ಗಾರರನ್ನು ಈ ವಿನೂತನ ಕೃಷಿ ಆಂದೋಲನಕ್ಕೆ ಅಣಿಮಾಡುವುದು ಈ ಕೇಂದ್ರದ ಉದ್ದೇಶವಾದರೂ ಇಲ್ಲಿ 'ತರಬೇತಿ', 'ವಿಸ್ತರಣೆ', 'ತಂತ್ರಜ್ಞಾನ ವರ್ಗಾವಣೆ' ಇತ್ಯಾದಿ ಆಧುನಿಕ ಕೃಷಿ ಅಭಿವೃದ್ಧಿಯ ಆಚಾರಗಳಿಗೆ ಅವಕಾಶವಿರುವುದಿಲ್ಲ. ಇದರ ಉದ್ದೇಶವೇನಿದ್ದರೂ ರೈತರು ಸೇರಿ, ಕಲೆತು, ಪರಸ್ಪರ ವಿಚಾರ ಮತ್ತು ಅನುಭವಗಳ ವಿನಿಮಯ ಮಾಡಿಕೊಳ್ಳುತ್ತಾ ಸಾಮೂಹಿಕ ಕಲಿಕೆಗೆ ಎಡೆಮಾಡುವುದು ಮಾತ್ರವಾಗಿರುತ್ತದೆ. ಜೊತೆಗೆ ಆ ಕೇಂದ್ರದೊಳಗೆ ಸಂರಕ್ಷಿಸಿರುವ ನಾಟೀ ತಳಿಗಳ ಹಾಗೇ ಸಾವಯವ ಕೃಷಿ ಬಗ್ಗೆ ನಡೆಯುತ್ತಿರುವ ತಳಮಟ್ಟದ 'ಮುಕ್ತ' ಸಂಶೋಧನೆಗಳ ಬಗ್ಗೆ ವಿವರ ನೀಡುತ್ತಾ 'ನಯಾ ಕೃಷಿ'ಯ ಊಟ, ಆತಿಥ್ಯಗಳ ಅನುಭವ ನೀಡುವುದೂ ಆಗಿರುತ್ತದೆ. ಊರ ಮಹಿಳೆಯರಿಗೆ ನಾಟಿ ಅಡಿಗೆ ತಿಂಡಿಗಳ ಬಗೆಗಿನ ತಮ್ಮ ಪ್ರಾವಿಣ್ಯತೆಯ ಪ್ರದರ್ಶನಕ್ಕೆ ಒಂದು ಸದಾವಕಾಶವೂ ಇಲ್ಲಿರುತ್ತದೆ.

ನಯಾ ಕೃಷಿಯ ಅಷ್ಟಸೂತ್ರಗಳು

1985ರ ಸುಮಾರಿಗೆ, ತಡವಾಗಿಯಾದರೂ ಹಸಿರು ಕ್ರಾಂತಿ ತಂತ್ರಜ್ಞಾನ ಬಾಂಗ್ಲಾದೇಶವನ್ನು ಆವರಿಸಿತ್ತು. ಆದರೆ ಕೆಲಕಾಲದಲ್ಲೆ ಅದರ ಕರಾಳ ಛಾಯೆಗಳು ರೈತರಿಗೆ ಪರಿಚಯವಾಗತೊಡಗಿದವು. ಅದರಲ್ಲಿ ಎರಡು ಗಂಭೀರ ವಿಚಾರಗಳು ಮಾತ್ರ ಬಂಗಾಳದ ರೈತ ಸಮುದಾಯವನ್ನು ತೀವ್ರ ಚಿಂತನೆಗೆ ಎಡೆಮಾಡಿಕೊಡುವಂತೆ ಮಾಡಿದವು. ಹಸಿರುಕ್ರಾಂತಿ ತಂತ್ರಜ್ಞಾನದಿಂದ ಮುಖ್ಯ ಉತ್ಪನ್ನವಾದ ಧಾನ್ಯದ ಇಳುವರಿ ಜಾಸ್ತಿಯಾದರೂ, ಕೃಷಿಯಿಂದ ದೊರಕುತ್ತಿರುವ, ಮೇವು, ಪೌಷ್ಠಿಕತೆ ಇತ್ಯಾದಿಗಳನ್ನು ಪರಿಗಣಿಸಿದಲ್ಲಿ "ಒಟ್ಟು ಇಳುವರಿ" (Total yield) ಕಡಿಮೆಯಾದವು. ಇನ್ನು ಲೆಕ್ಕಾಚಾರದ ವಿಚಾರಕ್ಕೆ ಬಂದರಂತೂ ಖರ್ಚು ಕಳೆದ ನಂತರ ಉಳಿಯುವ ನಿವ್ವಳ ಗಳಿಕೆ ಅಷ್ಟಕ್ಕಷ್ಟಾಗುವಂತಾಯ್ತು. ಹಾಗೇ ರಾಸಾಯನಿಕ ಕ್ರಿಮಿ ಕೀಟ ನಾಶಕಗಳ ಬಳಕೆಯಿಂದ ಆಹಾರದಲ್ಲಿ ವಿಷ ಏರುತ್ತಾ ಬಂದು ಆರೋಗ್ಯದ ಮೇಲೆ ದುಷ್ಪರಿಣಾಮ ಸ್ಪಷ್ಟವಾಗಿ ಗೋಚರಿಸುವಂತಾಯ್ತು. ಇದು ಮೊದಲು ರೈತ ಮಹಿಳೆಯರ ಗಮನಕ್ಕೆ ಬಂದು ಅವರಿಂದ ಈ ರಾಸಾಯನಿಕ ಕೃಷಿಯ ಬಗ್ಗೆ ತೀವ್ರ ವಿರೋಧ ಮೇಲೇಳುವಂತಾಯ್ತು. ಇವೆಲ್ಲಾ ಹೊಸ ಕೃಷಿ ಪದ್ಧತಿಯತ್ತ ಗಮನ ಹರಿಸುವಂತೆ ಮಾಡಿ 'ನಯಾ ಕೃಷಿ ಆಂದೋಲ'ನದ ಹುಟ್ಟಿಗೆ ಬುನಾದಿ ಹಾಕುವಂತೆ ಮಾಡಿತು



ಎಂದರೆ ತಪ್ಪಾಗಲಾರದು. ಮೊದಲಿಗೆ ರೈತ ಮಹಿಳೆಯರು ರಾಸಾಯನಿಕ ಕ್ರಿಮಿ, ಕೀಟನಾಶಕಗಳ ಬಳಕೆಗೆ ಕಡಿವಾಣ ಹಾಕುವಂತೆ ಮಾಡಿದರು. ಇದರಿಂದಾಗಿ ರೈತರು ಸಾವಯವ ಗೊಬ್ಬರ, ಹಸಿರೆಲೆ ಮತ್ತು ಕಾಂಪೋಸ್ಟ್‌ಗಳತ್ತ ನೋಡಲು ಶುರುಮಾಡಿದರು. ಈ ನಿಟ್ಟಿನಲ್ಲಿ ಅವರಿಗೆ ತಕ್ಷಣ ಗೋಚರಿಸಿದ್ದು ಎಲ್ಲಿ ನೋಡಿದರಲ್ಲಿ ಯಥೇಚ್ಛವಾಗಿ ಬಿದ್ದುಕೊಳೆಯುತ್ತಿರುವ ಅಂತರಗಂಗೆ(*Water hyacinth*) ಕಳೆ. ಇದನ್ನು ವೈಜ್ಞಾನಿಕವಾಗಿ ಕಾಂಪೋಸ್ಟ್ ಗೊಬ್ಬರ ಮಾಡಲು ರೈತರು ಕಲಿತಿದ್ದು ಮೊದಲ ತಾಂತ್ರಿಕ ಆವಿಷ್ಕಾರವೆನ್ನಬಹುದು. ನಂತರ, ಈ ಪರ್ಯಾಯ ಕೃಷಿಯ ಮೇಲೆ ರೈತರ ಅನುಭವ, ವಿಶ್ವಾಸಗಳು ಗಟ್ಟಿಯಾಗುತ್ತಾ ಹೋದಂತೆಲ್ಲಾ ಕೆಲವು ಸಾರ್ವತ್ರಿಕ ತತ್ವಗಳು ಮೇಲೇಳುತ್ತಾ ಹೋದವು. ಅವುಗಳೆಂದರೆ:

1. ರಾಸಾಯನಿಕ, ಕ್ರಿಮಿ ಕೀಟ ನಾಶಕಗಳ ಬಳಕೆ ಸಂಪೂರ್ಣ ನಿಷಿದ್ಧ.

2. ರಾಸಾಯನಿಕ ಗೊಬ್ಬರಗಳ ಉಪಯೋಗವನ್ನು ನಿಧಾನವಾಗಿ ಕೈ ಬಿಡುವುದು.

3. ಭೂಮಿಯ ಫಲವತ್ತತೆಯನ್ನು ಕಾಪಾಡಿ ಮತ್ತಷ್ಟು ಹೆಚ್ಚಿಸಲು ಬಹುಬೆಳೆ, ಅಂತರ್‌ಬೆಳೆ, ಮಿಶ್ರಬೆಳೆ, ಇತ್ಯಾದಿ ಹಿಂದಿನಿಂದಲು ಪರಿಚಯವಿರುವ ಪದ್ಧತಿಗಳನ್ನು ಅಳವಡಿಸುವುದು.

4. ಬಹುಪಯೋಗಿ ನಾಟೀ ಮರಗಳ 'ಅರಣ್ಯಕೃಷಿ' (agroforestry) ಯನ್ನು ಭತ್ತ ಮತ್ತು ತರಕಾರಿ ಬೆಳೆಗಳ ಜೊತೆ ಜೊತೆಗೆ ಅಳವಡಿಸುವುದು. ಈ ಮೂಲಕ ಉರುವಲು, ಕಿರು ಅರಣ್ಯ ಉತ್ಪನ್ನಗಳು, ಗೃಹ ನಿರ್ಮಾಣಕ್ಕೆ ಅಗತ್ಯವಿರುವ ಮರ ಮುಟ್ಟುಗಳನ್ನು ರೈತರು ಸ್ವಯಂ ಪೂರೈಸಿಕೊಳ್ಳುವಂತಾಗುವುದು.

5. ಬೇಸಾಯದ 'ಸಂಪೂರ್ಣ ಇಳುವರಿ' (Total yield) **ಯನ್ನು ಲೆಕ್ಕಾಚಾರ ಹಾಕಿ ನಿರ್ಧರಿಸುವುದು:** ಧಾನ್ಯದ ಇಳುವರಿಯ ಜೊತೆಗೆ ಬೇಸಾಯದಿಂದ ದೊರಕಬಹುದಾಗಿರುವ ಇತರೇ ಉಪಯೋಗಗಳಾದ ಮೇವು, ಆಹಾರದ ರುಚಿತನ, ಪೌಷ್ಠಿಕತೆ, ಭೂ ಫಲವತ್ತತೆ ಹೆಚ್ಚಳ, ಕ್ರಿಮಿ ಕೀಟಗಳಿಂದ ಕನಿಷ್ಠ ಹಾನಿ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ನಿವ್ವಳ ಗಳಿಕೆಯ ಲೆಕ್ಕಾಚಾರ ಹಾಕಿ ಆ ಮೂಲಕ ಜೀವವೈವಿಧ್ಯ ಕೃಷಿ ಸೂಕ್ತವೋ ಆಧುನಿಕ ಕೃಷಿ ಉತ್ತಮವೋ ಎಂದು ನಿರ್ಧರಿಸುವುದು.

6. ಪೂರ್ತಿ ಅಥವಾ ಅರೆ ಸಾಕಾಣಿಕೆಗೊಳಪಟ್ಟಿರುವ ಜಾನುವಾರು, ಪಶು ಪಕ್ಷಿಗಳೆಲ್ಲವೂ ಸಮಗ್ರ ಕೃಷಿಯ ಅವಿಭಾಜ್ಯ ಅಂಗಗಳು. ನಾಟಿ ತಳಿ, ಬೆಳೆ, ಜಾನುವಾರು, ಪಶು ಪಕ್ಷಿಗಳ 'ವೈವಿಧ್ಯಮಯ ಕೃಷಿ'ಯ ಜೊತೆ ಮತ್ಸ್ಯ ಕೃಷಿ (aquaculture) ಸೇರಿದರಂತೂ ಪರಿಸರ ಸುಸ್ಥಿರತೆ ಮತ್ತು ಆರ್ಥಿಕದಾಯಕತೆಗಳ ವಿಚಾರದಲ್ಲಿ ಅದಕ್ಕೆ ಸರಿಸಾಟಿ ಮತ್ತಿನ್ನೊಂದು ಕೃಷಿ ಇರದು. ಬಾಂಗ್ಲಾ ದೇಶದ ವಿಚಾರದಲ್ಲಿ ನಯಾ ಕೃಷಿಯಲ್ಲಿ ಮತ್ಸ್ಯಕೃಷಿಯನ್ನು ಒಟ್ಟಾರೆ ಕೃಷಿಯಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲ. ಜಾನುವಾರುಗಳಿಗೆ ಕೃತಕ ಗರ್ಭದಾರಣೆಯಂತಹ ಅಸಹಜ ವಿಚಾರಗಳನ್ನು ಸಂಪೂರ್ಣ ನಿಷೇಧಿಸಲಾಗಿದೆ.

7. ಬೀಜ ಮತ್ತು ಜೈವಿಕ ಸಂಪನ್ಮೂಲಗಳು ರೈತರ ಮತ್ತು ಸಮುದಾಯದ ಮಟ್ಟದಲ್ಲೇ ಸಂರಕ್ಷಿಸಲ್ಪಡಬೇಕು. ಇವು ಯಾವುದೇ ಕಾರಣಕ್ಕೂ ರೈತರ, ಅವರಲ್ಲೂ ಮುಖ್ಯವಾಗಿ ಮಹಿಳೆಯರ ಕೈ ತಪ್ಪದಂತೆ ನೋಡಿಕೊಳ್ಳಬೇಕು. ಇವುಗಳ ಖಾಸಗೀಕರಣ ಮತ್ತು ಇವುಗಳ ಮೇಲೆ ಪೇಟೆಂಟ್ ತರುವುದನ್ನು ತಪ್ಪಿಸಬೇಕು.

8. ನೀರು; ಹೊಳೆ, ಮಳೆ, ಪ್ರವಾಹ ಯಾವುದೇ ರೀತಿಯ "ಸಹಜ" ಮೂಲದ್ದಿರಲಿ ಅದು ಅತ್ಯಂತ ಅಮೂಲ್ಯ ಸಂಪತ್ತು. ಇದರಿಂದಾಗಿಯೇ ಕೃಷಿ ಮತ್ತು ಮತ್ಸ್ಯ ವೈವಿಧ್ಯ ಬೆಳೆಯುವಂತಾಗಿದೆ. ಬಾಂಗ್ಲಾ ದೇಶದ ವಿಚಾರದಲ್ಲಿ 'ಪ್ರವಾಹ' ಅಪಾಯಕಾರಿ ಎಂಬ ಒಂದು ರೀತಿಯ ತಪ್ಪು ಪರಿಕಲ್ಪನೆ ಏಳುವಂತೆ ಮಾಡಲಾಗಿದೆ. ಇದಕ್ಕೆ ಪ್ರತಿಯಾಗಿ ಪ್ರವಾಹದ ನೀರನ್ನು ಹಿಡಿದಿಡಲು ಹಾಗೇ ಇದರಿಂದಾಗುವ ಅಪಾಯ ತಪ್ಪಿಸಲು ವಿಶೇಷ ರೀತಿಯಲ್ಲಿ ಮನೆಗಳನ್ನು ಎತ್ತರದಲ್ಲಿ ನಿರ್ಮಿಸುವಂತಹ ಗ್ರಾಮೀಣ ಯೋಜನೆ, ಭೂವಿನ್ಯಾಸದ ಮಾರ್ಪಾಡು ಇತ್ಯಾದಿ ಕ್ರಮಗಳ ಅಗತ್ಯವಿದೆ. ಆ ಮೂಲಕ ಕೃಷಿ ಮತ್ತು ಮತ್ಸ್ಯಗಾರಿಕೆ ಬೆಳೆಸುವ ವಿನೂತನ ಕಾರ್ಯಕ್ರಮಕ್ಕೆ ನಯಾ ಕೃಷಿ ಆಂದೋಲನ ಒತ್ತುಕೊಡಲಿದೆ.

> **ಅದೇ ರೀತಿ ಬೇರೆಡೆ, ಅದರಲ್ಲೂ ಬಯಲು ನಾಡುಗಳಲ್ಲಿ ಕೊಳವೆ ಬಾವಿಗಳ ಮೂಲಕ ಭೂಗರ್ಭಕ್ಕೆ ಘಾಸಿ ಮಾಡಿ ಅಂತರ್‌ಜಲ ಬಳಸುವುದಕ್ಕೆ ನಯಾಕೃಷಿ ಆಂದೋಲನ ಸಂಪೂರ್ಣ ಕಡಿವಾಣ ಹಾಕುತ್ತದೆ.**

ಈ ಅಷ್ಟಸೂತ್ರ ಆಧಾರಿತ ಅನನ್ಯ ಕೃಷಿ ಪ್ರಯೋಗ ಇಂದು ಬಾಂಗ್ಲಾದೇಶದ ಸುಮಾರು 60 ಸಾವಿರ ರೈತ ಸಮೂಹಕ್ಕೆ ಪಸರಿಸಿರುತ್ತದೆ. ಬಿಷ್ಣುಪುರ ಸೇರಿದಂತೆ ಐದಾರು ಇತರ ಸ್ಥಳಗಳು ಈ ಪ್ರಯೋಗದ ಕೇಂದ್ರ ಬಿಂದುಗಳಾಗಿವೆ. ಈ ಕೇಂದ್ರಗಳು ಬರಿದೇ ಹೊಸತೊಂದು ಕೃಷಿ ಚಳುವಳಿಗೆ ರೈತರನ್ನು ತಯಾರು ಮಾಡದೆ, ಅತ್ಯಂತ ಮೂಲಭೂತ ಸ್ತರದಲ್ಲಿ ಅದಕ್ಕೆ ಪೂರಕವಾದ ಒಂದು ಬದುಕಿನ ರೀತಿಗೇ ಅವರನ್ನು ಅಣಿಗೊಳಿಸುತ್ತಿದೆ.

ಜೀವ ವೈವಿಧ್ಯ ಮತ್ತು ಸಂಸ್ಕೃತಿ ಕೇಂದ್ರಿತ ಕೃಷಿ

ಮೂಲ ಅರ್ಥದಲ್ಲಿ ನಯಾ ಕೃಷಿ ಆಂದೋಲನದ ಉದ್ದೇಶ, ಪರಿಸರ ಆಧಾರಿತ ಕೃಷಿ (Ecological Agriculture) ಆದರೂ ಇದು ತಂತ್ರಜ್ಞಾನ ಕೇಂದ್ರಿತ ಕೃಷಿಯಲ್ಲ. ಬದಲಿಗೆ ಸಂಸ್ಕೃತಿ ಕೇಂದ್ರಿತವಾದದ್ದು. ತಂತ್ರಜ್ಞಾನದ ಮುಖೇನ ಎಲ್ಲದಕ್ಕೂ ಪರಿಹಾರವಿದೆ ಎನ್ನುತ್ತಾ ಇತ್ತೀಚೆಗಿನ ದಿನಗಳಲ್ಲಿ ಮೇಲೇಳುತ್ತಿರುವ ಸಾವಯುವ ಅಥವಾ ಸುಸ್ಥಿರ ಕೃಷಿಯನ್ನು ನಯಾ ಕೃಷಿ ಆಂದೋಲನ ತಿರಸ್ಕರಿಸುತ್ತದೆ. ಇಂಗ್ಲೀಷ್ ಪರಿಭಾಷೆಯ 'Agriculture' ಪದದಲ್ಲಿ ಹುದುಗಿರುವ ಆ 'Culture' ಅಥವಾ ಸಂಸ್ಕೃತಿ ಎನ್ನುವ ಪರಿಕಲ್ಪನೆಗೆ ನಿಜ ಅರ್ಥ ಕೊಡುವ ಪ್ರಯತ್ನ ಇದಾಗಿರುತ್ತದೆ.

ಪ್ರತಿ ಕೇಂದ್ರದಲ್ಲೂ ಈ ನಯಾ ಕೃಷಿ ಆಂದೋಲನಕ್ಕೆ ಭೂಮಿಕೆ ರೂಪಿಸಲು ನೂರಾರು ಯುವಕ ಯುವತಿಯರು ಸನ್ನದ್ಧರಾಗಿದ್ದಾರೆ. ಬಹುತೇಕ ಮುಸ್ಲಿಂ ಬಡ ಕುಟುಂಬದಿಂದ ಬಂದಿರುವ ಈ ಯುವ ಸಮೂಹವನ್ನು ಪರ್ಯಾಯ ಬದುಕಿನ ರೀತಿಯತ್ತ ಸಾಮೂಹಿಕ ಭಜನೆ ಮೂಲಕ ಅಣಿವುಗೊಳಿಸುವ ಕಾರ್ಯ ಅತ್ಯಂತ ವಿನೂತನ ರೀತಿಯದಾಗಿರುತ್ತದೆ. ನಯಾ ಕೃಷಿ ಕೇಂದ್ರಗಳಿಗೆ ಆಗಮಿಸುವ ರೈತರನ್ನು, ದೇಶ ವಿದೇಶದ ವೀಕ್ಷಕರೆಲ್ಲರನ್ನು ಅಲ್ಲಿನ ಅತಿಥಿಗಳು ಎಂದು ಪರಿಗಣಿಸಲಾಗುತ್ತದೆ. ಅವರಿಗೆ ಕಿಂಚಿತ್ತೂ ಲೋಪ ಬರದ ರೀತಿಯಲ್ಲಿ ಸ್ವಯಂ ಸ್ಫೂರ್ತಿಯಿಂದ ಅತಿಥಿ ಸತ್ಕಾರ ನೀಡಿ, ಗೌರವಿಸುವಂತೆ ಅಲ್ಲಿನ ಯುವಕ ಯುವತಿಯರಿಗೆ ಮೊದಲು ಅಣಿಗೊಳಿಸಲಾಗುತ್ತದೆ. ಕೇಂದ್ರದ ವ್ಯಾಪ್ತಿಯಲ್ಲಿರುವ ಭೂಮಿಯಲ್ಲಿ ಜೀವ ವೈವಿಧ್ಯ ಸಾವಯುವ ಕೃಷಿ, ಪಶುಸಂಗೋಪನೆ, ಮತ್ಸ್ಯಗಾರಿಕೆ ನಡೆಸುವತ್ತ ನಂತರ ತರಬೇತಿ ನೀಡಲಾಗುತ್ತದೆ. ಈ ನವ ತರುಣ ತರುಣಿಯರು ಬೆಳಗ್ಗೆ ಮತ್ತು ಸಂಜೆ ಹೀಗೆ ದಿನಕ್ಕೆ ಎರಡು ಬಾರಿ ಕೂಡಿ ಪಕ್ಕವಾದ್ಯ, ತಾಳ, ಮೇಳಗಳನ್ನು ಮೇಳೈಸಿಕೊಂಡು ಅತ್ಯಂತ ಶಾಸ್ತ್ರೀಯವಾಗಿ ನಡೆಸುವ ಸುಮಧುರ ಭಜನೆ ಮತ್ತು ಸಮೂಹ ಗಾನಗಳು ಇಡೀ ಕೇಂದ್ರವನ್ನು ಮೀರಿ ಸುತ್ತಮುತ್ತಲೆಲ್ಲಾ ಆವರಿಸುತ್ತಾ ಒಂದು ಅನನ್ಯ ಆಧ್ಯಾತ್ಮಿಕ ಅನುಭವಕ್ಕೆ ಎಡೆ ಮಾಡಿ ಕೊಡಲಾಗುತ್ತದೆ. ಬಾಂಗ್ಲಾ ದೇಶಕ್ಕೆ ಸೂಫಿ ಸಂಪ್ರದಾಯದ ಫಕೀರ್ ಲಾಲನ್ ಷಹಾರಂತಹವರು ಗಟ್ಟಿಗೊಳಿಸಿದ ಒಂದು ಭಕ್ತಿ ಚಳುವಳಿಯೇ ಇದರ ಜೊತೆಗೆ ಭೌದ್ದ ಧರ್ಮದಿಂದ ಹಿಡಿದು ಹಿಂದೂ ಧರ್ಮದ ಶಕ್ತಿ (ಶೈವ) ಮತ್ತು ವೈಷ್ಣವ ಸಂಪ್ರದಾಯಗಳ ಪ್ರಭಾವವೂ ಹೀಗೆ ಹಿಂದೂ ಮುಸ್ಲಿಂ ಎನ್ನುವ ಬೇಧ ಭಾವವಿಲ್ಲದೇ ಎಲ್ಲಾ ಧರ್ಮಗಳ ಸತ್ವ ಮತ್ತು ಆಳ ಅನುಭವಗಳನ್ನು ಒಳಗೊಂಡಿರುವ ಗೀತ ಗಾಯನಗಳ ಸಾಮೂಹಿಕ ಪಠನ ಇಲ್ಲಿ ನಡೆಯುತ್ತಿರುತ್ತದೆ. ಬೆಳಗಿನ ಸೂರ್ಯೋದಯಕ್ಕೂ ಮೊದಲು ನಡೆಯುವ ಭಜನೆ ಬಹುತೇಕವಾಗಿ ಶ್ರೀ ಕೃಷ್ಣ ಹಸುಗಳನ್ನು ಕೊಳಲನ್ನೂದುತ್ತಾ ಕರೆಯುವ, 'ಗೋಗ್ರಾಸ' ಗಾಯನವಾಗಿರುತ್ತದೆ! ಕೋಮುವಾದದ ಬೆಂಕಿಯಲ್ಲಿ ಇಂದು ಇಡೀ ಭಾರತ ಉಪಖಂಡವೇ ಕುದಿಯುತ್ತಿರುವಾಗ, ಕೃಷಿ ಬದುಕಿಗೆ ಈ ರೀತಿ ಜಾತ್ಯಾತೀತ ಸಾಂಸ್ಕೃತಿಕ ಆಯಾಮ ನೀಡಿ, ದಿನ ನಿತ್ಯದ ಚಟುವಟಿಕೆಗಳಿಗೆ ಅಣಿಯಾಗುವ ಇಲ್ಲಿನ ರೀತಿ ವರ್ಣನೆಗೆ ಮತ್ತು ಹೋಲಿಕೆಗೆ ನಿಲುಕದ್ದಾಗಿರುತ್ತದೆ. ಅದೇ ರೀತಿ, ನಯಾ ಕೃಷಿಯು ಈ ಕೇಂದ್ರಗಳಲ್ಲಿ ನಡೆಸುತ್ತಿರುವ ಪ್ರಯೋಗವನ್ನು ದೇಶದಾದ್ಯಂತ ಜಾತ್ರೆ, ಹಬ್ಬ, ಮೇಳಗಳ ಮೂಲಕ ಪಸರಿಸುವ ಬಗೆಯೂ ಅಷ್ಟೇ ವಿನೂತನವಾಗಿರುತ್ತದೆ.

ನಯಾ ಕೃಷಿ ರೈತರು ತಮ್ಮ ವೃತ್ತಿಗೆ ಹತ್ತಿರದ ಕಸುಬುದಾರರಾದ ನೇಯ್ಗಾರರ ಸಂಘಟನೆ ಜೊತೆಗೂಡಿ ಪ್ರತೀ ವರ್ಷವೂ ವಸಂತಮಾಸದ ಪ್ರಾರಂಭದಲ್ಲಿ ಆಂದೋಲನದ ತತ್ವವನ್ನು ಜನಪರಗೊಳಿಸಲು ಜೀವ ವೈವಿಧ್ಯ ಹಬ್ಬ ಮತ್ತು ಮೇಳಗಳನ್ನಾಚರಿಸುತ್ತಾರೆ. ಇದರ ಜೊತೆಗೆ ಬಾಂಗ್ಲಾದ ಕೆಲ ಜನಪದ ಸಾಂಸ್ಕೃತಿಕ ಸಂಘಟನೆಗಳೂ ಸೇರಿ ಹಾಡು, ಕುಣಿತ, ಬೀದಿ ನಾಟಕಗಳನ್ನು ನಡೆಸುತ್ತಾ ಈ ಹಬ್ಬ ಮೇಳಗಳಿಗೆ ರಂಗನ್ನು ಒದಗಿಸುತ್ತವೆ. ರೈತರ, ನೇಯ್ಗಾರರ ಜೊತೆಗೆ ಬೆಸ್ತರು, ಕಂಬಾರರು, ಬಡಗಿ, ಚಮ್ಮಾರರಿಂದ ಸ್ಥಳೀಯ ಕರಕುಶಲಗಾರರು, ಹೀಗೆ ಗ್ರಾಮೀಣ ಪ್ರದೇಶದ ವೈವಿಧ್ಯ ದೇಶೀ ಕಸುಬುದಾರರ ಸಮೂಹವೇ ಪ್ರತೀ ಕೇಂದ್ರದಲ್ಲಿ ಸೇರಿ ಈ ಮೇಳಗಳಲ್ಲಿ ತಮ್ಮ ತಮ್ಮ ವೃತ್ತಿಯಲ್ಲಿ ಸಾಧಿಸಿರುವ ಸಾಮರ್ಥ್ಯ ಮತ್ತು ಕಸುಬುಗಾರಿಕೆಯ ಪ್ರದರ್ಶನ ಮಾಡುತ್ತಾರೆ. ಜೊತೆಗೆ ಪರಸ್ಪರ ಅನುಭವ, ವಿಚಾರ ವಿನಿಮಯ ಮಾಡಿಕೊಳ್ಳುತ್ತಾ ಬಾಂಗ್ಲಾದ ಈ ವೈವಿಧ್ಯ ಕಸುಬುಗಾರಿಕೆ, ಸಂಸ್ಕೃತಿ ಮತ್ತು ಜೀವ ವಿವಿಧತೆಯ ಉಳಿವಿಕೆಗೇ ಬಂದಿರುವ ಸಂಚಕಾರವನ್ನು ನಿಧಾನವಾಗಿ ಅರಿಯುತ್ತಾ ಒಂದು ಸಮಗ್ರ ಜನಪರ ಹೋರಾಟಕ್ಕೆ ವೇದಿಕೆ ಸಿದ್ಧವಾಗುವಂತೆ ಈ ಹಬ್ಬ ಮೇಳಗಳು ಕೆಲಸ ಮಾಡುತ್ತವೆ.

ಜೀವ ವೈವಿಧ್ಯ ಮತ್ತು ಮಹಿಳೆ

ನಯಾ ಕೃಷಿ ಆಂದೋಲನದ ಕೇಂದ್ರ ಬಿಂದು ಜೀವ ವೈವಿಧ್ಯವಾದರೂ, ಆ ನಿಟ್ಟಿನಲ್ಲಿ ತಾಂತ್ರಿಕ ವಿಚಾರಕ್ಕಿಂತ, ಸಾಂಸ್ಕೃತಿಕ ಮತ್ತು ಸಾಮಾಜಿಕವಾಗಿ ಮಹಿಳೆಯರಿಗೂ ಜೀವ ವೈವಿಧ್ಯಕ್ಕೂ ಇರುವ ನಿಕಟ ಸಂಬಂಧವನ್ನು ಅರಿತು ಗಟ್ಟಿ ಮಾಡುವತ್ತ ಅಧಿಕ ಒತ್ತು ನೀಡಲಾಗಿದೆ. "ಸಹೋದರಿಯರೇ ನಾಟಿ ತಳಿಗಳನ್ನು ನಿಮ್ಮ ಕೈಗೆಟುಕುವಷ್ಟು ದೂರದಲ್ಲಿ ಹಿಡಿದಿಟ್ಟುಕೊಂಡಿರಿ" ಎಂಬ ಘೋಷಣೆಯೊಂದಿಗೆ ಪ್ರಾರಂಭವಾದ ಆಂದೋಲನ ದೇಶದಾದ್ಯಂತ "ನಯಾ ಕೃಷಿ ಬೀಜ ಜಾಲ"ದ ನಿರ್ಮಾಣ ಮಾಡಿ ಆ ಮೂಲಕ ಸ್ಥಳದಲ್ಲೇ ನಾಟೀ ತಳಿಗಳ ಸಂರಕ್ಷಣೆ, ಹಾಗೇ ಈ ಎಲ್ಲಾ ಪ್ರಯತ್ನಗಳಿಗೆ ರಾಷ್ಟ್ರಮಟ್ಟದಲ್ಲಿ ಸಾಂಸ್ಥಿಕ ರೂಪ ನೀಡುವಂತಹ "ಸಮುದಾಯ ಬೀಜ ಸಂಪತ್ತಿನ ಕೇಂದ್ರ" ಗಳ ನಿರ್ಮಾಣ ಮಾಡುವವರೆಗೂ ಮುಂದುವರೆದಿರುತ್ತದೆ. ನಯಾ ಕೃಷಿ ಆಂದೋಲನ ಗಟ್ಟಿಯಾಗಿರುವ ಹಳ್ಳಿಗಳಲ್ಲೆಲ್ಲಾ ಅಲ್ಲಿ ಲಭ್ಯವಿರುವ ಜೀವ ವೈವಿಧ್ಯದ ಪಟ್ಟಿಯೊಂದನ್ನು ತಯಾರಿಸಿಡಲಾಗುತ್ತದೆ. ಇಲ್ಲಿ ಮಹಿಳೆಯರು ಸ್ವಯಂ ಸಾಮರ್ಥ್ಯದಿಂದ ಸಂರಕ್ಷಿಸಿಕೊಂಡು ಬಂದಿರುವ ತಳಿಗಳಿಗೆ ವಿಶೇಷ ಒತ್ತು ನೀಡಲಾಗುತ್ತದೆ. ಇದು ಮುಂದೆ ಜೀವ ವೈವಿಧ್ಯ ನಶಿಸುವ ಸಂದರ್ಭದಲ್ಲಿ ಎಚ್ಚರಿಕೆ ಗಂಟೆ ಹೊಡೆಯಲು ಸಹಾಯವಾಗುತ್ತದೆ. ಅಂಥಹ ಸಮರ್ಥ ಗ್ರಾಮೀಣ ಮಹಿಳಾ ತಜ್ಞರಿಂದ ಸಮುದಾಯ ಮಟ್ಟದಲ್ಲಿ ಜೀವ ವೈವಿಧ್ಯದ ಸಂರಕ್ಷಣೆಯಾಗುವಂತೆ ವಿಶೇಷ ರೀತಿಯ ಉಸ್ತುವಾರಿ ಕಾರ್ಯಕ್ರಮ ರೂಪಿಸಲಾಗಿದೆ. ರೈತರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯಿಂದ ನೋಡಿದರೆ ಹೆಚ್ಚು ಬಡ ರೈತರು ನಯಾ ಕೃಷಿ ಆಂಧೋಲನದಲ್ಲಿ ಪಾಲ್ಗೊಳ್ಳುತ್ತಾರೆ, ಏಕೆಂದರೆ, ರಾಸಾಯನಿಕ ಗೊಬ್ಬರ ಮತ್ತು ಕೀಟ ನಾಶಕಗಳ ಬೆಲೆ ಅಧಿಕವಾಗಿರುತ್ತದೆ. ಪ್ರತಿ ವರ್ಷವು ಇಂತಹ ಅಧಿಕ ಬೆಲೆಯ ಪರಿಕರಗಳನ್ನು ರೈತ ಹೊಲಕ್ಕೆ ಹಾಕಬೇಕಿರುವುದರಿಂದ ಅವನ ಸಾಲದ ಹೊರೆ ಹೆಚ್ಚಾಗುತ್ತದೆ. ಇದರಿಂದ ಬಡ ರೈತರು ನಯಾ ಕೃಷಿ ಆಂದೋಲನದತ್ತ ಆಸಕ್ತಿ ತೋರುತ್ತಿದ್ದಾರೆ. ಮಧ್ಯಮ ವರ್ಗದ ರೈತರು, ಮಾರುಕಟ್ಟೆ ಹಾಗೂ ಲಾಭದ ದೃಷ್ಟಿಯಿಂದ ನಯಾ ಕೃಷಿ ಆಂದೋಲನದ ಕಡೆಗೆ ಹೆಜ್ಜೆ ಹಾಕುತ್ತಿದ್ದಾರೆ. ಮಧ್ಯಮ ಹಾಗೂ ಶ್ರೀಮಂತ ವರ್ಗದ ರೈತರು, ಕೃಷಿ ಮಾಡಲು ಇಚ್ಛಿಸುತ್ತಾರಾದರೂ ತಮ್ಮ ಕೈ ಕೆಸರು ಮಾಡಿಕೊಳ್ಳಲು ಬಯಸುವವರಲ್ಲ. ಆದರೂ ರಾಸಾಯನಿಕಗಳ ಬಳಕೆಯಿಂದ ಪ್ರಕೃತಿ ಮೇಲೆ ಆಗುತ್ತಿರುವ ದುಷ್ಪರಿಣಾಮಗಳು ಮತ್ತು ನಶಿಸುತ್ತಿರುವ ಜೀವ ವೈವಿಧ್ಯ ಜಗತ್ತು ಅವರನ್ನೂ ನಯಾ ಕೃಷಿ ಆಂದೋಲನದಲ್ಲಿ ಸಹಭಾಗಿಗಳಾಗುವಂತೆ ಮಾಡಿದೆ. ನಯಾ ಕೃಷಿ ರೈತರು ಅಧಿಕ ಇಳುವರಿ ನೀಡುವ ತಳಿಗಳ ವಿರೋಧಿಗಳಲ್ಲ. ಆದರೆ ಹೈಬ್ರಿಡ್ ತಳಿಯನ್ನು ಅವರು ಸುತಾರಾಂ ಒಪ್ಪಲು ತಯಾರಿಲ್ಲ. ಆ ತಳಿಗಳನ್ನು ಬೆಳೆಯಲು ಕೀಟನಾಶಕಗಳ, ರಾಸಾಯನಿಕಗಳ ಹಾಗು ರಸಗೊಬ್ಬರಗಳ ಬಳಕೆಯ ಅವಶ್ಯಕತೆ ಇರುತ್ತದೆ ಎಂಬ ಕಾರಣದಿಂದ.

ಮೂಲ ಚೇತನ

ಈ ಎಲ್ಲಾ ಪ್ರಯೋಗಗಳ ಹಿಂದೆ ಕೆಲಸ ಮಾಡುತ್ತಿರುವ ಅಧಮ್ಯ ಚೇತನ ಡಾ. ಫರಹದ್ ಅಹ್ಮದ್. ಗಟ್ಟಿ ವ್ಯಕ್ತಿತ್ವದ ಕ್ರಾಂತಿಕಾರಿ ಕವಿ. ಬಾಂಗ್ಲಾದ ಸ್ವಾತಂತ್ರ್ಯಾಂದೋಲನದಲ್ಲಿ ನೇರ ಭಾಗವಹಿಸಿ, ಗಾಂಧೀಜಿಯ ಸಹವಾಸವನ್ನನುಭವಿಸಿರುವ ಫರಹದ್ ಇಂದು ಇಡೀ ಬಾಂಗ್ಲಾ ದೇಶದಲ್ಲೇ ಸರ್ಕಾರಿ ಮತ್ತು ಸರ್ಕಾರೇತರ ವಲಯಗಳಲ್ಲೆಲ್ಲಾ ಅತ್ಯಂತ ಗೌರವಾನ್ವಿತ ವ್ಯಕ್ತಿ. ತೀಕ್ಷ್ಣ ಮಾತು, ಸ್ಪಷ್ಟ ವಿಚಾರಗಳ ಇವರು ಪರಿಸರ, ಕೃಷಿ, ಜೀವ ವಿವಿಧತೆ ವಿಚಾರಗಳಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಹಲವು ಹತ್ತಾರು ಒಡಂಬಡಿಕೆಗಳ ಹಿಂದೆ ಕೆಲಸ ಮಾಡುತ್ತಿರುವವರು. ಇವರ ಪತ್ನಿ ಫರಿದಾ, ಮಹಿಳಾ ಚಳುವಳಿ ವಿಚಾರದಲ್ಲಿ ಇಡೀ ತೃತೀಯ ಜಗತ್ತನ್ನೇ ಪ್ರತಿನಿಧಿಸುವ ಮಹಿಳೆ. ಈಕೆ ಫರಹದ್ ಪ್ರಯೋಗಗಳ ಹಿಂದೆ ಗಟ್ಟಿಯಾಗಿ ನಿಂತು ಅದಕ್ಕೆ ಸಾಂಸ್ಕೃತಿಕ ಆಯಾಮವನ್ನೂ ಮೀರಿ ಪ್ರೀತಿ, ವಾತ್ಸಲ್ಯಗಳ 'ಮಾತೃ ಛಾಯೆ' ನೀಡಿದ ವಿಶಾಲ ಹೃದಯದ ಮಹಿಳೆ. ಹೀಗೆ ಫರಹದ್ ದಂಪತಿಗಳ ಮಿಲನ ಇಡೀ ನಯಾ ಕೃಷಿ ಆಂದೋಲನಕ್ಕೆ ವಿಶೇಷ ಮೆರಗು ಮತ್ತು ಶಕ್ತಿಯನ್ನೊದಗಿಸುತ್ತದೆ. ಮಾರ್ಕ್ಸ್ ಮತ್ತು ಲೆನಿನ್ ವಾದವನ್ನು ಮೊದಮೊದಲು ಒಪ್ಪಿದ ಇವರು ಈಗ ಅದರಿಂದ ಪೂರ್ತಿ ಭ್ರಮನಿರಸರಾಗಿರುವರು. ಗಾಂಧೀಜಿಯ ಗಾಢ ಪರಿಣಾಮ ಇವರ ಎಲ್ಲಾ ಪ್ರಯೋಗಗಳ ಮೇಲಾಗಿದ್ದರೂ ಅಹಿಂಸಾ ತತ್ವವನ್ನು ಒಂದು 'ವ್ಯೂಹ' (Strategy) ವಾಗಿ ನೋಡುತ್ತಿರುತ್ತಾರೆ ಹೊರತು ಅದಕ್ಕೆ ಒಂದು ವಾದದ ಗೌರವ ಸ್ಥಾನ ಕೊಡಲು ಒಪ್ಪಲಾರರು. ಹಾಗೇ ವ್ಯಕ್ತಿಗಳ ವೈಯಕ್ತಿಕ ಮಟ್ಟದ ಭೌದ್ಧಿಕ, ಆಧ್ಯಾತ್ಮಿಕ ಮತ್ತು ಕ್ರಿಯಾತ್ಮಕ ಸ್ತರಗಳ ಶ್ರೇಷ್ಠತೆಯ ವಿಚಾರಗಳಲ್ಲಿ ಅಪಾರ ನಂಬಿಕೆ ಹೊಂದಿರುವ ಇವರು ಸಮಾನತೆಯ ಸರಳೀಕರಣದ ಜನತಂತ್ರದ ಪೂರ್ತಿ ಅನುಯಾಯಿಯಲ್ಲ. ಹಾಗಾಗಿ ಜನತಂತ್ರವನ್ನು ರಾಜಕೀಯ ಮತ್ತು ಆರ್ಥಿಕ ಸಮಾನತೆ ವಿಚಾರಗಳಿಗೆ ಮಾತ್ರ ಸೀಮಿತಗೊಳಿಸಲು ಸಿದ್ಧರಿರುವಂತಿದೆ. ಬಾಂಗ್ಲಾ ವಿಭಜನೆ ನಂತರ ಪಾಕ್ ದೇಶದ ಕ್ರೂರ ನರಹತ್ಯೆಯಿಂದ ತೀವ್ರವಾಗಿ ನೊಂದಿರುವ ಫರಹದ್, ಭಾರತದ ಬುದ್ಧಿಜೀವಿಗಳು ಮತ್ತು ಮಧ್ಯಮ ವರ್ಗ ಉಪಖಂಡದಲ್ಲಿ ತಾಂಡವಾಡುತ್ತಿರುವ ಹಸಿವು, ಬಡತನ, ನಿರುದ್ಯೋಗ, ಅಸಮಾನತೆಗಳ ಬಗ್ಗೆ ಸಂಪೂರ್ಣ ಮುಖ ತಿರುಗಿಸಿರುವುದಕ್ಕೆ ತೀವ್ರ ಅಸಮಧಾನ ವ್ಯಕ್ತಪಡಿಸುತ್ತಿರುವರು.



ಫರಹದ್ ದಂಪತಿಗಳು


ಈ ಎಲ್ಲಾ ವಿಚಾರಗಳನ್ನು ನಿರ್ಭಯವಾಗಿ ವ್ಯಕ್ತಪಡಿಸುತ್ತಿದ್ದರೂ ಫರಹದ್ ಓರ್ವ ದ್ವಂದ್ವಮಯ ವ್ಯಕ್ತಿಯಾಗಿ ಕಾಣುತ್ತಿಲ್ಲ. ಬದಲಿಗೆ ಇಡೀ ಉಪಖಂಡದ ಚಾರಿತ್ರಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯ ತೀವ್ರ ಆಳಕ್ಕಿಳಿದು ಸಾರ್ವತ್ರಿಕ ಬದುಕಿನಲ್ಲಿ ವಾಸ್ತವತೆಯನ್ನು ಪ್ರತಿಪಾದಿಸುತ್ತಿರುವ ಅಪ್ಪಟ ವ್ಯಕ್ತಿತ್ವದ ಓರ್ವ ಪ್ರವಾದಿಯಂತೆ ಕಾಣಿಸುತ್ತಿರುವರು. ವಿಚಾರ ಮತ್ತು ಸಿದ್ಧಾಂತಗಳ ಮಟ್ಟದ ಈ ಗೊಂದಲಗಳ ಜೊತೆಗೆ ತೀವ್ರ ಆಧ್ಯಾತ್ಮಿಕತೆ ತಮ್ಮ ವ್ಯಕ್ತಿತ್ವ ಮತ್ತು ಆಚಾರಗಳ ಬಲಿ ತೆಗೆದುಕೊಳ್ಳುವುದನ್ನು ತಪ್ಪಿಸಲು ಇಂದು ಫರಹದ್ ಅಹಮದ್ ಪರಿಸರ ಮತ್ತು ಜೀವ ವಿವಿಧತೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ಈ ನಯಾ ಕೃಷಿ ಆಂದೋಲನವನ್ನು ಗಟ್ಟಿ ಮಾಡಲು ತಮ್ಮನ್ನು ಪೂರ್ತಿ ತೊಡಗಿಸಿಕೊಂಡಿರುವಂತಿದೆ. ದುಗುಡ ದುಮ್ಮಾನಗಳು ಭರಿಸಲಸಾಧ್ಯವಾದಾಗ ಫರಹದ್ ಪ್ರಾತ: ಮತ್ತು ಸಾಯಂಕಾಲದ ಭಜನೆಯಲ್ಲಿ ಸೇರಿಕೊಳ್ಳುತ್ತಾರೆ. ತಾಳ ಬಾರಿಸುತ್ತಾ ಹಾಡಲು ಶುರುಮಾಡಿದರೆಂದರೆ ಫರಹದ್ ತಮ್ಮನ್ನು ತಾವೇ ಮರೆಯುವುದು ಮಾತ್ರವಲ್ಲ ಇಡೀ ಗುಂಪೇ ಮರೆಯುವಂತೆ ಮಾಡುತ್ತಾರೆ.

ಕೃಷಿ ಪ್ರವೀಣರಾಗಿರುವ ರಾಜಶೇಖರಯ್ಯ ಮಠದ

ಸತತ ಪರಿಶ್ರಮದ ಜೊತೆಗೆ ವೈಜ್ಞಾನಿಕ ಹಿನ್ನೆಲೆಯನ್ನು ಅಳವಡಿಸಿಕೊಂಡು ಕೃಷಿ ಎನ್ನುವ ತಪಸ್ಸನ್ನು 50 ವರ್ಷಗಳಿಂದ ನಿರಂತರವಾಗಿ ಆಚರಿಸಿ ಅನೇಕ ಕೃಷಿ ಅನ್ವೇಷಣೆಗಳನ್ನು ಮಾಡಿರುವ, ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿಯ ರಾಜಶೇಖರಯ್ಯ ಮಠದ ಅವರ ಸಾಧನೆ ಅವಿಸ್ಮರಣೀಯ.

ಆರ್. ಎಮ್. ಮಠದ ಅವರು, ಅವರ ತಂದೆಗೆ ಏಕೈಕ ಪುತ್ರ.. ಏಳು ಜನ ತಂಗಿಯರ ಪ್ರೀತಿಯ ಅಣ್ಣ. ಚಿಕ್ಕವರಿದ್ದಾಗಿನಿಂದ ವೈಜ್ಞಾನಿಕ ಚಿಂತನೆ, ಅನ್ವೇಷಣಾ ಪ್ರವೃತ್ತಿಯಲ್ಲಿ ಎತ್ತಿದ ಕೈ. ಆಗಿನ ಕಾಲದಲ್ಲೇ ಬಿ.ಕಾಂ. ಪದವಿ ಗಳಿಸಿ ಎಲ್ಲರ ಗೌರವ ಮತ್ತು ಮೆಚ್ಚುಗೆಗೆ ಪಾತ್ರರಾಗಿದ್ದರು. ಖಾಸಗಿ ಕಂಪನಿಗಳಲ್ಲಿ ಮತ್ತು ಸರ್ಕಾರಿ ಕಛೇರಿಗಳಲ್ಲಿ ನೌಕರಿ ಸಿಕ್ಕುವ ಎಲ್ಲಾ ಸಾಧ್ಯತೆಗಳಿದ್ದರು ಇವರ ಒಲವು ಕೃಷಿಯ ಕಡೆಗೆ, ಮನೆಯ ಹಿರಿ ಮಗನಾಗಿ ಪಾರಂಪರಿಕವಾಗಿ ಬಂದ ಕೃಷಿಯನ್ನು ಮುಂದುವರೆಸಬೇಕೆಂಬ ಅವರ ತಂದೆಯ ಪ್ರೋತ್ಸಾಹ ಮಠದವರಿಗೆ ಆತ್ಮವಿಶ್ವಾಸದ ಸೆಲೆಯಾಗಿತ್ತು.

ಅರವತ್ತು ಎಕರೆ ಭೂಮಿಯಲ್ಲಿ ಕೃಷಿ ಮಾಡುವ ಮಹತ್ತರ ಜವಾಬ್ದಾರಿಯನ್ನು ಮಠದವರು ಹೊತ್ತು ಸಾಗತೊಡಗಿದರು. ಎಲ್ಲದರಲ್ಲೂ ಹೊಸತನ್ನು ಹುಡುಕುವ ಮನಸ್ಸು ಮಠದವರದು. ತಲೆ ತುಂಬ ಪ್ರಶ್ನಾವಳಿಗಳೇ! ತಾನಾಯಿತು, ತನ್ನ ಕೃಷಿಯಾಯಿತು ಎಂಬಂತೆ ತಮ್ಮನ್ನು ತಾವು ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿಸಿಕೊಂಡರು.



ಬಲರಾಮ ನೇಗಿಲು

ಕೃಷಿ ವಿಜ್ಞಾನ ಕೇಂದ್ರದ ಹನುಮನ ಹಟ್ಟಿ ತರಬೇತಿ ಕೇಂದ್ರದ ಮುಖ್ಯಸ್ಥರಾದ ಗುರುಪಾದನಟ್ಟಿ ಅವರು ಒಮ್ಮೆ ಆಕಸ್ಮಿಕವಾಗಿ ಮಠದವರ ಹೊಲಕ್ಕೆ ಭೇಟಿ ನೀಡಿದ್ದರು. ನಂತರ ಇವರ ಕೃಷಿ ಕುರಿತು 'ಸಾಧಕರು ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಲೇಖನ ಬರೆದು 'ಮೇಟಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿದರು. ಮಠದವರು, ನೇರವಾಗಿ ಗುರುಪಾದನಟ್ಟಿಯವರನ್ನು ಕಾಣಲು ಹೋದರು. ಕೃತಜ್ಞತೆ ತಿಳಿಸಲು ಅಲ್ಲ, 'ಸಾಧಕರೆಂದು ಕರೆದಿದ್ದರಿಂದ ನನಗೆ ಮುಜುಗರವಾಗುತ್ತದೆ, ನನ್ನಲ್ಲೇನು ಅಂತಹ ಸಾಧನೆ ಕಂಡಿರೆಂದು?' ಅವರನ್ನು ಕೇಳಲು. ಮಠದವರ ನೈಜ ವ್ಯಕ್ತಿತ್ವಕ್ಕೆ ಇದೊಂದು ಉದಾಹರಣೆಯಷ್ಟೆ.

ಮಠದವರ ಹೊಲದಲ್ಲಿ ಗರಿಕೆ ಹುಲ್ಲಿನ ಸಮಸ್ಯೆ ತೀವ್ರವಾಗಿತ್ತು. ಹೇಗಾದರು ಮಾಡಿ ಗರಿಕೆ ಹುಲ್ಲನ್ನು ಬೇರು ಸಮೇತ ತೆಗೆಯುವ ಹಂಬಲ ಮಠದವರದು. ಅವರೇ ನಿರ್ಮಿಸಿದ ಬಲರಾಮ ನೇಗಿಲನ್ನು ಕೊಂಚ ಮಾರ್ಪಾಡು ಮಾಡಿ ಎರಡು ಎತ್ತು ಕಟ್ಟಿ ಹೊಡೆದರು. ಹೊಲದಲ್ಲಿದ್ದ ಗರಿಕೆಯನ್ನೆಲ್ಲಾ ಒಂದೇ ದಿನದಲ್ಲಿ ಬೇರು ಸಹಿತ ಹೊರ ತೆಗೆದು ಬಿಟ್ಟರು.

ಮಾಗಿ ಕಾಲದ ನಂತರ, ಹೊಲದ ತುಂಬೆಲ್ಲಾ ಬೆಳೆಯ ತ್ಯಾಜ್ಯಗಳು ಹರಡಿರುವುದನ್ನು ಆಯ್ದು ಮತ್ತೆ ಭೂ ಸಿದ್ಧತೆ ಮಾಡುವ ಕಾರ್ಯಕ್ಕಾಗಿ ಸಮಯ ಮತ್ತು ಆಳುಗಳ ಕೊರತೆಗೊಂದು ಸುಲಭೋಪಾಯ ಕಂಡು ಹಿಡಿಯುವ ಆಲೋಚನೆ ಮಠದವರ ತಲೆಯಲ್ಲಿ ಸುಳಿಯಿತು. ಇದಕ್ಕೆ ಉತ್ತರವಾಗಿ ಗೀರು ಮಣೆ ಬೆಳಕಿಗೆ ಬಂದಿತು. ಒಂದು ಮರದ ಹಲಗೆಗೆ, ನಿಗದಿತ ಅಂತರದಲ್ಲಿ ಮೊಳೆಗಳನ್ನು ಜೋಡಿಸಿ ಎತ್ತು ಕಟ್ಟಿ ಎಳೆದರು, ಹೊಲ ಸ್ವಚ್ಛವಾಯಿತು.

ಗೀರು ಮಣೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿ, ಉಳುಮೆಯ ನಂತರ ಹೊಲ ಹರಗುವ ಉಪಕರಣ ಸಿದ್ಧಪಡಿಸಿದರು. ಅದು ಶಿರೋಮಣಿಯಾಯಿತು. ಶಿರೋಮಣಿಗೆ ಎರಡು ಎತ್ತುಗಳನ್ನು ಕಟ್ಟಿ ಹೊಲ ಹರಗುವ ಕಾರ್ಯವನ್ನು ಟಿಲ್ಲರ್‌ನಿಂದ ಮಾಡುವಷ್ಟು ಸಮರ್ಪಕವಾಗಿ ಮಾಡಿದರು.

ವರಲಕ್ಷ್ಮಿ ಹತ್ತಿಯನ್ನು ಬೆಳೆದ ಮಠದವರಿಗೆ ಹೊಲಕ್ಕೆ ಗೊಬ್ಬರ ಹಾಕುವ ವಿಚಾರದಲ್ಲಿ ಒಂದು ಗಂಭೀರ ಸಮಸ್ಯೆ ಎದುರಾಯಿತು. ಆಳುಗಳ ಕೊರತೆ, ಸಮಯದ ಅಭಾವಕ್ಕಿಂತ ಹೆಚ್ಚಾಗಿ ಗೊಬ್ಬರವನ್ನು ಬೇರುಗಳ ವಲಯಕ್ಕೆ ಮತ್ತು ಮಣ್ಣಿನಲ್ಲಿ ತೇವಾಂಶವಿರುವ ಆಳಕ್ಕೆ ಹಾಕುವ ಕಾರ್ಯ ಆಳುಗಳಿಂದ ಮಾಡಿಸಲು ಆಗುತ್ತಿರಲಿಲ್ಲ. ಬಹುಪಯೋಗಿ ಬಲರಾಮ ನೇಗಿಲು ಅವರ ಈ ಸಮಸ್ಯೆಗೆ ಪರಿಹಾರವಾಯಿತು, ಇದರಿಂದ ಗೊಬ್ಬರವನ್ನು ಪರಿಣಾಮಕಾರಿಯಾಗಿ ಹಾಕಲಾಗುವುದಷ್ಟೆ ಅಲ್ಲದೆ ಕುಂಟೆಯ ಹಿಂಭಾಗದಲ್ಲಿ ಒಂದು ಸಣ್ಣ ಚಕ್ರ, ಅಳವಡಿಸಿರುವುದರಿಂದ ಗೊಬ್ಬರ ಹಾಕಿದ ನಂತರ ಈ ಚಕ್ರ ಅದರ ಮೇಲೆ ಮಣ್ಣು ಮುಚ್ಚುವ ಕಾರ್ಯವನ್ನು ಮಾಡುತ್ತದೆ.

ಮಠದವರ ಅನುಭವದ ಭಂಡಾರದಲ್ಲಿ ಇಂತಹ ಆವಿಷ್ಕಾರಗಳಿಗೆ ಕೊರತೆಯೇ ಇಲ್ಲ. ಅವಶ್ಯಕತೆ ಆವಿಷ್ಕಾರದ ತಾಯಿ ಎಂಬಂತೆ ಮಠದವರು ತಮ್ಮ ಸಮಸ್ಯೆಗಳಿಗೆ ತಾವೇ ಉತ್ತರ ಹುಡುಕುತ್ತಾ ಕೃಷಿ ಪಯಣ ಮುಂದುವರಿಸಿದ್ದಾರೆ. 71ನೇ ವಯಸ್ಸಿನಲ್ಲೂ ಅವರ ಉತ್ಸಾಹ, ಆತ್ಮವಿಶ್ವಾಸ, ಕೃಷಿಯೊಂದಿಗೆ ಅವರಿಗಿರುವ ನಂಟು ಎಂಥವರನ್ನು ಬೆರಗುಗೊಳಿಸುತ್ತದೆ.

ಸಂಗ್ರಹ ಲೇಖನ: ಶಶಿಕಲ ಎಸ್. ಜಿ.

ರೈತ ಮಹಿಳೆಯರಿಗೆ ಈ ಬಾರಿಯ ವಿಶೇಷ "ಸೃಷ್ಟಿ" ಸನ್ಮಾನ

ಪ್ರೊ.: ಅನಿಲ್ ಗುಪ್ತಾರವರ ನೇತೃತ್ವದಲ್ಲಿ ಕಾರ್ಯಗತವಾಗಿರುವ 'ಸೃಷ್ಟಿ' (SRISTI - Society for Research and Initiatives for Sustainable Technologies and Institutions) ಎಂಬ ಸರ್ಕಾರೇತರ ಸಂಸ್ಥೆಯು ಪರಿಸರ ಜೀವ ವಿವಿಧತೆ, ಸಾವಯವ ಕೃಷಿ ಮುಂತಾದ ಕ್ಷೇತ್ರಗಳಲ್ಲಿ ಅವಿರತ ಪರಿಶ್ರಮ ಮಾಡುವಂತಹವರನ್ನು ಗುರುತಿಸಿ ಎರಡು ವರ್ಷಕ್ಕೊಮ್ಮೆ ಸನ್ಮಾನಿಸಲಾಗುತ್ತದೆ. ಈ ಬಾರಿಯ ಮಹಿಳೆಯರಿಗೇ ಒತ್ತು ನೀಡಿದ ಸೃಷ್ಟಿ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿದ ರೈತ ಮಹಿಳೆಯರ ಸಾಧನೆಯ ಕಿರುಪರಿಚಯ ಇಗೋ ಇಲ್ಲಿದೆ.

ಗುಜರಾತ್ ರಾಜ್ಯದ ಅಹಮದಾಬಾದಿನಲ್ಲಿ ನಡೆದ ಸೃಷ್ಟಿ ಸನ್ಮಾನ ಸಮಾರಂಭವು ಅರ್ಥಪೂರ್ಣವಾಗಿರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಬದುಕಿನ ಕಷ್ಟಕಾರ್ಪಣ್ಯಗಳೊಂದಿಗೆ ಸೆಣಸಾಡುತ್ತಾ, ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ಸಮಾಜಕ್ಕೆ ನೀಡುತ್ತಿರುವ ಅನೇಕ ತಳ ಮಟ್ಟದ ಶ್ರಮ ಜೀವಿಗಳೇ ಈ ಸಮಾರಂಭದ ಕೇಂದ್ರ ಬಿಂದುವಾಗಿದ್ದರು.

ಈ ಬಾರಿಯ ಸೃಷ್ಟಿ ಸನ್ಮಾನ ಸಮಾರಂಭವು ಫೆಬ್ರವರಿ 23, 2002ರಂದು ಅಹಮದಾಬಾದಿನಲ್ಲಿ ಜರುಗಿತು. ಸಮಾರಂಭ ಪ್ರಾರಂಭವಾಗಲು ಇನ್ನು ಕೆಲವೇ ಕೆಲವು ಕ್ಷಣಗಳಿದ್ದವು. ಏಕಾಏಕಿ ಎಲ್ಲರ ಗಮನ ಬಾಗಿಲ ಕಡೆ ಹರಿಯಿತು. ಆಧುನಿಕತೆಯ ಸೋಂಕು ಸಹ ಇಲ್ಲದ, ಕಚ್ಚೆ ಸೀರೆ ಧರಿಸಿದ, ನಡಿಗೆ, ಮಾತು ಮತ್ತು ವೇಷಭೂಷಣ ಎಲ್ಲದರಲ್ಲೂ ಇತರರಿಗಿಂತ ಭಿನ್ನವಾಗಿದ್ದ ಒಬ್ಬರು ಮಹಿಳೆ ಸಭೆಗೆ ಬಂದರು, ಅವರೇ ಪ್ರಕೃತಿಯೊಂದಿಗೆ ಬದುಕುತ್ತಿರುವ ಸೀತಾಜಿ. ಕಾಡೇ ಈಕೆಯ ಪ್ರಪಂಚ, ಮರ, ಗಿಡಗಳೇ ಆತ್ಮೀಯರು. ಹೊರಗಿನ ಪ್ರಪಂಚವನ್ನು ತಿಳಿಯುವುದರಲ್ಲಾಗಲಿ, ಸಂಪರ್ಕ ಬೆಳೆಸುವುದರಲ್ಲಾಗಲಿ, ಈಕೆಗೆ ಆಸಕ್ತಿಯಿಲ್ಲ. ಕಾಡೆಂಬ ನಾಡಿನಲ್ಲಿ, ಸಸ್ಯ ಶ್ಯಾಮಲೆಯಲ್ಲಿ ತನ್ನ ಅಗಮ್ಯ ಪಾರಂಪರಿಕ ಜ್ಞಾನದಿಂದ ಸುತ್ತ ಮುತ್ತಲಿನ ಜನಗಳ ರೋಗ ರುಜಿನಗಳನ್ನು ವಾಸಿ ಮಾಡುವ ಸೇವೆಯನ್ನು ಮಾಡುತ್ತಾ 'ಕಾಯಕವೇ ಕೈಲಾಸ' ವೆಂದು ಶ್ರಮಿಸುವ, ಗುಜರಾತಿನ ಡಂಗಾ ಜಿಲ್ಲೆಯ ಸವರ್ದ ಕಸಡ್ ಹಳ್ಳಿಯ ಸೀತಾಗಾಯಕ್‌ವಾಡ್, ಇಂದಿನ ಸಮಾಜಕ್ಕೆ ಆದರ್ಶ ನಾರಿಯೇ ಸರಿ.

ಸೀತೆಯು ಬಾಲ್ಯದಲ್ಲಿ ಶಾಲೆಗೆ ಹೋಗಿ ವ್ಯವಸ್ಥಿತ ರೀತಿಯಲ್ಲಿ ಕಲಿತದ್ದು ತುಂಬಾ ಕಡಿಮೆ, ಅವರ ಮುಖ್ಯ ವಿದ್ಯಾಭ್ಯಾಸ ನಡೆದದ್ದು, ಅವರ ತಂದೆ ಮತ್ತು ಅಣ್ಣಂದಿರು ಗಿಡ ಮೂಲಿಕೆಗಳಿಂದ ಔಷಧಿ ತಯಾರಿಸುತ್ತಿದ್ದಾಗ ಅವರಿಗೆ ಸಹಾಯ ಮಾಡುತ್ತಿದ್ದುದರಿಂದ.

ಸೀತಾಜಿಯವರ ತಾತಂದಿರ ಕಾಲದಿಂದಲೂ ನಾಟೀ ವೈದ್ಯ ಪದ್ಧತಿ ಪಾರಂಪರಿಕವಾಗಿ ಬೆಳೆದು ಬಂದ ಮನೆತನದ ವೃತ್ತಿಯಾಗಿತ್ತು. ಕಾಡಿಗೆ ಹೋಗಿ ಔಷಧೀಯ ಸಸ್ಯಗಳನ್ನು ಗುರುತಿಸಿ ತಂದು, ರುಬ್ಬಿ, ಔಷಧಿ ಮಾಡುವುದು ಮತ್ತು ರೋಗಿಗಳಿಗೆ ಚಿಕಿತ್ಸೆ ನೀಡುವ ಕಾಯಕ ತಾತಂದಿರಿಂದ ತಂದೆಗೆ ವರ್ಗಾವಣೆಯಾಯಿತು. ತಂದೆ ಮತ್ತು ಅಣ್ಣಂದಿರೊಂದಿಗೆ ಸೀತೆ ಈ ಕಾರ್ಯಕ್ಕೆ ಮುಂದಾದರು, ಮನೆಯ ಕೊನೆ ಮಗಳಾದ ಸೀತೆ, ಮೊದಲಿನಿಂದಲು ನಾಟೀ ವೈದ್ಯಕೀಯದಲ್ಲಿ ಆಸಕ್ತಿ ತೋರಿಸಿದ್ದರಿಂದ ಆ ವಿದ್ಯೆ ಅವರಿಗೆ ಬೇಗ ಕರಗತವಾಯಿತು. ತನ್ನ ತಂದೆ ಮತ್ತು ಅಣ್ಣಂದಿರು ಮನೆಯಲ್ಲಿ ಇಲ್ಲದಿರುವಂತಹ ಸಂಧರ್ಭದಲ್ಲಿ ರೋಗಿಗಳು ಚಿಕಿತ್ಸೆಗಾಗಿ ಬಂದರೆ, ಚಿಕಿತ್ಸೆ ಮಾಡಲು ಸೀತಾ ಅವರೇ ಮುಂದಾಗುತ್ತಿದ್ದರು!

ಸೀತಾರವರಿಗೆ 16ನೇ ವಯಸ್ಸಿಗೆ ಮದುವೆಯಾಯಿತು. ಪತಿ ಲಿಸಿಯಾಬಾಯಿ ಅನಕ್ಷರಸ್ಥರಾದರೂ ಪತ್ನಿಯ ಕಾಯಕಕ್ಕೆ ಕೈ ಜೋಡಿಸಿದರು. ಔಷಧೀಯ ಸಸ್ಯಗಳ ಸಂಗ್ರಹಣೆಯಲ್ಲಿ ಸೀತಾರವರಿಗೆ ನೆರವಾದರು. ಲಿಸಿಯಾ ಬಾಯಿಯವರು ತೀವ್ರವಾದ ಹೊಟ್ಟೆ ನೋವಿನಿಂದ ಬಳಲುತ್ತಿರುವಾಗ ಹಾಗೂ ಮತ್ತೊಮ್ಮೆ ಮರದ ಮೇಲಿನಿಂದ ಬಿದ್ದು ಮೂಳೆ ನೋವಾದಾಗ ಸ್ವತ: ಸೀತಾ ಅವರೇ ಚಿಕಿತ್ಸೆ ನೀಡಿ ಪರಿಣಾಮಕಾರಿಯಾಗಿ ಗುಣಪಡಿಸಿದ್ದನ್ನು ಲಿಸಿಯಾಬಾಯಿ ಸದಾ ಹೆಮ್ಮೆಯಿಂದ ನೆನೆಯುತ್ತಾರೆ.

ಒಂದೂವರೆ ಎಕರೆ ಭೂಮಿಯಲ್ಲಿ ಲಿಸಿಯಾಬಾಯಿ ಹಾಗೂ ಸೀತಾಜಿ ಅವರು ರಾಗಿ ಮತ್ತು ತೊಗರಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಕೃಷಿಯನ್ನು ಅನುಸರಿಸುತ್ತಿದ್ದಾರೆ.

ಸೀತಾಜಿ ಅವರು ಎಲ್ಲಾ ರೀತಿಯ ರೋಗಗಳನ್ನು ಗುಣಪಡಿಸುತ್ತಾರೆ. ಆಧುನಿಕ ಔಷಧಿಗಳಿಂದ ಗುಣವಾಗದ ಅನೇಕ ಕಾಯಿಲೆಗಳನ್ನು ಇವರು ತಮ್ಮ ನಾಟೀ ಔಷಧಿಯಿಂದ ಗುಣಪಡಿಸಿದ್ದಾರೆ. ದೂರದ ಹಳ್ಳಿಗಳಿಂದ ಜನರು ಇವರನ್ನು ಹುಡುಕಿಕೊಂಡು ಬರುತ್ತಾರೆ. ರೋಗಿಗಳಿಂದ ಒಂದು ಪೈಸೆ ಸಹ ಪಡೆಯದೆ ಸೀತಾಜಿ ಚಿಕಿತ್ಸೆ ನೀಡುತ್ತಾರೆ.

ಔಷಧೀಯ ಸಸ್ಯಗಳಿಗೆ 5 ರಿಂದ 20 ಕಿ.ಲೋ. ಮೀಟರ್ ದೂರದವರೆಗೆ ಸೀತಾಜಿ ಕಾಡಿನಲ್ಲಿ ಅಲೆಯುತ್ತಾರೆ. ಇಷ್ಟೆಲ್ಲಾ ಕಷ್ಟ ಕಾರ್ಪಣ್ಯಗಳಿಂದ ಸೀತಾಜಿ ಜನರ ಸೇವೆ ಮಾಡುತ್ತಿದ್ದಾರೆ.

ಎಲೆ ಮರೆಯ ಕಾಯಿಯಂತೆ, ಅವಿರತವಾಗಿ ಶ್ರಮಿಸುತ್ತಿರುವ ಸೀತಾಜಿಯವರನ್ನು ಗುಜರಾತಿನ ಸೃಷ್ಟಿ ಸಂಸ್ಥೆಯು ಗುರುತಿಸಿ ಸನ್ಮಾನಿಸಿತು. ಸನ್ಮಾನ ಸಮಾರಂಭದಲ್ಲಿ ಸೀತಾಜಿಯವರಿಗೆ ಸನ್ಮಾನ ಮಾಡಿದ ಆ ಕ್ಷಣ ಸಭಿಕರೆಲ್ಲರ ಕಣ್ಣಲ್ಲೂ ನೀರು ತರಿಸುವಂತಿತ್ತು, ಸಂತಸದ ಉತ್ಕಟ ಕ್ಷಣ ಅದಾಗಿತ್ತು! ವೇಷ-ಭೂಷಣ, ಮಾತು, ರೀತಿ-ನೀತಿ ಎಲ್ಲದರಲ್ಲೂ ಸಾಂಪ್ರದಾಯಿಕತೆ ಮತ್ತು ನೈಜತೆಯನ್ನು ಕಾಯ್ದಿರಿಸಿಕೊಂಡಿರುವ ಸೀತಾಜಿ ಅವರು ಸನ್ಮಾನ ಸ್ವೀಕರಿಸಿ, ಎಲ್ಲರಿಗೂ ಕೃತಜ್ಞತೆ ತೋರಿದ ರೀತಿ ಅವರ ಮುಗ್ಧತೆಗೆ ಕನ್ನಡಿ ಹಿಡಿದಂತಿತ್ತು. ಇಂಥಹ ಅನೇಕ ಸೀತಾಜಿಯವರು ನಮ್ಮ ನಿಮ್ಮ ಸುತ್ತ ಮುತ್ತ ಇರಬಹುದು, ಅಂತವರನ್ನು ಬೆಳಕಿಗೆ ತಂದು ಪ್ರೋತ್ಸಾಹಿಸುವಲ್ಲಿ ಹಿತ್ತಲಗಿಡವು ಈ ಬಾರಿ ಸ್ವಲ್ಪ ಶ್ರಮವಹಿಸಿ, ಕರ್ನಾಟಕದಿಂದ ಮೂವರು ಗ್ರಾಮೀಣ ಮಹಿಳೆಯರಿಗೆ ಅಹಮದಾಬಾದಿನಲ್ಲಿ ಸನ್ಮಾನ ನೀಡುವಂತೆ ಮಾಡಿರುತ್ತದೆ.

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಈ ಬಾರಿ ಸೃಷ್ಟಿ ಸನ್ಮಾನ ಸಮಾರಂಭದಲ್ಲಿ ಸನ್ಮಾನಿತರಾದ ಕನ್ನಡಿಗ ರೈತ ಮಹಿಳೆಯರು:

ಸಾವಯವ ಶಿವಮ್ಮ

ಶಿವಮೊಗ್ಗ ಜಿಲ್ಲೆಯ ದುಮ್ಮನಳ್ಳಿಯ ಶಿವಮ್ಮನವರು 'ಸಾವಯವ ಶಿವಮ್ಮ' ಎಂದೇ ಹೆಸರಾಗಿರುವವರು. ಸಾಧನೆಯ ಹಾದಿಯಲ್ಲಿ ಅವರು ಕಂಡ ನೋವು, ಕಷ್ಟ ನಷ್ಟಗಳು ಅನೇಕ. ಆದರೂ ಎದೆಗುಂದದೆ ಕೃಷಿಯ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡು ಆತ್ಮವಿಶ್ವಾಸದಿಂದ ಮುನ್ನಡೆದರು. ಎರೆಹುಳು ಗೊಬ್ಬರ ತಯಾರಿಕೆಯಿಂದ ಪ್ರಾರಂಭವಾದ ಸಾವಯವದ ಒಲವು ಇಂದು ಅವರನ್ನು ಸಂಪೂರ್ಣ ಸಾವಯವ ಕೃಷಿಕರನ್ನಾಗಿಸಿದೆ.

ಸೋನ ಮಸೂರಿ ಮುಂತಾದ ಭತ್ತದ ತಳಿಗಳನ್ನು ಸಂಪೂರ್ಣ ಸಾವಯವ ಪದ್ಧತಿಯಲ್ಲಿ ಬೆಳೆಯುತ್ತಿದ್ದಾರೆ. ಎರೆಹುಳು ಸಾಕಾಣಿಕೆ ಬಗ್ಗೆ ರೈತರಿಗೆ ಮುಖ್ಯವಾಗಿ ರೈತ ಮಹಿಳೆಯರಿಗೆ, ಕೃಷಿ ಕಾಲೇಜು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಾರೆ! ಕೃಷಿಯಲ್ಲಿ ಅಷ್ಟೇ ಅಲ್ಲದೆ ಅವರ ಸೇವೆ ಸಮಾಜದ ಒಳಿತಿನೆಡೆಗೂ ಹರಿದಿದೆ. ದುಮ್ಮನ ಹಳ್ಳಿಯ ಸುತ್ತ ಮುತ್ತಲಿನ ಬಣಜಿಗ ಬುಡಕಟ್ಟು ಜನಾಂಗದ ಮಹಿಳೆಯರಲ್ಲಿದ್ದ ದುಶ್ಚಟಗಳನ್ನು ದೂರ ಮಾಡಿ, ಸ್ವಸಹಾಯ ಗುಂಪುಗಳನ್ನು ಮಾಡಿದ್ದಾರೆ. ರೈತ ಮಹಿಳೆಯರನ್ನು ಸಾವಯವ ಕೃಷಿಯ ಕಡೆಗೆ ಪ್ರೇರೇಪಿಸುತ್ತಾ ಮಾರ್ಗದರ್ಶನ ನೀಡುತ್ತಿದ್ದಾರೆ.

ಹಳೇ ತಳಿಗಳ ಮದ್ದೂರಮ್ಮ

ಕನಕಪುರ ತಾಲ್ಲೂಕಿನ ತೇರುಬೀದಿ ಗ್ರಾಮದ ಮದ್ದೂರಮ್ಮನಿಗೆ ತಮ್ಮ ಸ್ಥಳೀಯ ತಳಿಗಳನ್ನು ಉಳಿಸಿ ಬೆಳೆಸುವುದರಲ್ಲಿ ವಿಶೇಷ ಆಸಕ್ತಿ. ಹಳ್ಳಿಯ ಹೆಣ್ಣುಮಕ್ಕಳನ್ನು ಸಂಘಟಿಸಿ, ಹಳೇ ತಳಿಗಳ ಬೀಜ ಸಂಗ್ರಹಣೆ ಮತ್ತು ಇತರ ರೈತರಿಗೆ ವಿತರಣೆಗೆ ಪ್ರೇರೇಪಿಸಿ ಇಂದು ಬೀಜದ ಬ್ಯಾಂಕ್ ಒಂದನ್ನೇ ಸ್ಥಾಪಿಸಿದ್ದಾರೆ. ಮದ್ದೂರಮ್ಮನ ಉತ್ಸಾಹ, ಆತ್ಮವಿಶ್ವಾಸ ಅನುಕರಣೀಯವಾದದ್ದು. ಹೆಚ್ಚಿನ ವಿವರಗಳಿಗೆ: ಹಿ.ಗಿ. ಪೈ7, ಕೊ3, 2001, ನೋಡಿ.

ಜೀವ ವಿವಿಧತೆಯ ಜ್ಯೋತಿ


ಚಿಕ್ಕಮಗಳೂರು ಜಿಲ್ಲೆಯ, ಕೊಪ್ಪ ತಾಲ್ಲೂಕಿನ ಕುಡಿನೆಲ್ಲಿ ಗ್ರಾಮದ ಜ್ಯೋತಿಯವರು ನಾಟೀ ಔಷಧಿಗಾಗಿ ಬಳಸುವ ಔಷಧೀಯ ಸಸ್ಯಗಳನ್ನು ತಮ್ಮ ಮನೆಯ ಹಿತ್ತಲಿನಲ್ಲಿ ಬೆಳೆದು ಸಂರಕ್ಷಿಸುತ್ತಿದ್ದಾರೆ. ಔಷಧಿ ತಯಾರಿಸಲು, ಕಾಡುಗಳಿಗೆ ಹೋಗಿ ಗಿಡ ಮೂಲಿಕೆ ತರುವವರಿಂದ ಮಾಹಿತಿ ಸಂಗ್ರಹಿಸಿ, ಅಂತಹ ಗಿಡಗಳನ್ನು ಒಂದೆಡೆ ಒಟ್ಟು ಸೇರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಜೀವ ವೈವಿಧ್ಯದ ಬಗ್ಗೆ ಶಾಲಾ ಮಕ್ಕಳಲ್ಲಿ ಅರಿವು ಮೂಡಿಸಲು ಸಹಕರಿಸುತ್ತಿರುವ ಕಮ್ಮರಡಿಯ ವಿಶ್ವತೀರ್ಥ ಬಾಲಿಕಾ ಪ್ರೌಢ ಶಾಲೆಯ ಶ್ರೀ ಬಾಲಕೃಷ್ಣರವರಿಗೂ ಈ ಬಾರಿಯ ಸೃಷ್ಟಿ ಸನ್ಮಾನ ಪ್ರಶಸ್ತಿ ದೊರಕಿದೆ.

ಸಂಗ್ರಹ ಲೇಖನ: ಶಶಿಕಲ ಎಸ್. ಜಿ.

> ಹಿತ್ತಲಗಿಡದ ಎರಡು ಸಾವಿರದ ಇಸವಿಯವರೆಗಿನ ಎಲ್ಲಾ ಸಂಚಿಕೆಗಳು ಲಭ್ಯವಿರುತ್ತವೆ. ರೂ. 350/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ಸೊಪ್ಪುಗತ್ತರಿ

ಕೃಷಿಯಲ್ಲಿ ಕೆಲವೊಂದು ಸಣ್ಣ ಪುಟ್ಟ ಕೆಲಸಗಳೇ ಆದರೂ, ಅದಕ್ಕೆ ಬೇಕಾಗುವ ಸಮಯ ಮತ್ತು ಶ್ರಮ ಹೆಚ್ಚಿನದಾಗಿರುತ್ತದೆ. ಹಸಿರೆಲೆ ಗೊಬ್ಬರವನ್ನು ಸಣ್ಣ ಸಣ್ಣ ತುಂಡಾಗಿಸಿ ಹೊಲಕ್ಕೆ ಹಾಕಿದರೆ ಗೊಬ್ಬರ ಬೇಗ ಕೊಳೆಯುತ್ತದೆ. ದನಕರುಗಳಿಗೆ ತಿನ್ನಿಸುವ ಮೇವನ್ನು ಸಹ ಸಣ್ಣದಾಗಿ ಕತ್ತರಿಸಿಕೊಟ್ಟರೆ ಪ್ರಾಣಿಗಳಿಗೆ ತಿನ್ನಲು ಸುಲಭ ಮತ್ತು ಮೇವು ವ್ಯಯವಾಗುವುದನ್ನು ತಪ್ಪಿಸಬಹುದು. ಮೇವನ್ನೇ ಆಗಲಿ ಹಸಿರೆಲೆ ಗೊಬ್ಬರವನ್ನೇ ಆಗಲಿ ದಿನ ನಿತ್ಯದ ಬಳಕೆಯ ಕತ್ತಿ ಅಥವಾ ಕುಡಗೋಲಿನಿಂದ ಕತ್ತರಿಸುವುದು ಕಷ್ಟದ ಕಾರ್ಯ ಮತ್ತು ಹೀಗೆ ಮಾಡಲು ಬೇಕಾಗುವ ಸಮಯವೂ ಹೆಚ್ಚು. ಇವೆಲ್ಲಾ ಬಹುತೇಕ ಮಹಿಳೆಯರೇ ಮಾಡುವುದರಿಂದ ಅವರ ಮೇಲಿನ ಒತ್ತಡದ ಪರಿಣಾಮ ಎಲ್ಲರಿಗೂ ತಿಳಿದಿರುವಂತಹುದ್ದೆ. ಕಾಸರಗೋಡು ಜಿಲ್ಲೆಯ ಸರವು ಮನೆಯ ಗೋಪಾಲಕೃಷ್ಣ ಶರ್ಮ ಅವರು ಈ ಸಮಸ್ಯೆಗೊಂದು ಸೂಕ್ತ ಪರಿಹಾರ ಕಂಡು ಹಿಡಿದಿದ್ದಾರೆ.



ಈ ಕತ್ತರಿಯಿಂದ ಹಸಿರು ಮೇವು, ಒಣ ಹುಲ್ಲು, ಧಾನ್ಯದ ದಂಟುಗಳು, ಗೊಬ್ಬರಕ್ಕಾಗಿ ಬಳಸುವ ಹಸಿರೆಲೆ, ತರಗೆಲೆ, ತೆಂಗಿನ ಸೋಗೆ ಅಡಿಕೆ ಸೋಗೆ, ಬಾಳೆ ದಂಡು, ಅಡಿಕೆ ಹಾಳೆ ಮತ್ತು ತೆಂಗಿನ ಸಿಪ್ಪೆ ಮುಂತಾದ ಅತಿನಾರಿನ ವಸ್ತುಗಳನ್ನು ಸಣ್ಣದಾಗಿ ತುಂಡರಿಸಬಹುದು.

ಈ ಯಂತ್ರವು ಸನ್ನೆಯ ಮತ್ತು ಕತ್ತರಿಯ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಗೋಪಾಲಕೃಷ್ಣ ಶರ್ಮ ಅವರು ಈ ಯಂತ್ರವನ್ನು ಮಾನವ ಶ್ರಮ ಉಳಿತಾಯ, ಸಮಯದ ಉಳಿತಾಯ ಮತ್ತು ಕಣ್ಣು ಹಾಗು ಕೈಗಳ ರಕ್ಷಣೆಯ ಮುಖ್ಯ ಉದ್ದೇಶವಾಗಿರಿಸಿಕೊಂಡು ನಿರ್ಮಿಸಿದ್ದಾರೆ.

ಈ ಕತ್ತರಿಯು ಸಂಪೂರ್ಣ ಕೈ ಚಾಲಿತ ಯಂತ್ರವಾಗಿದೆ. ವಸ್ತುಗಳನ್ನು ತುಂಡರಿಸಲು ಇಬ್ಬರು ವ್ಯಕ್ತಿಗಳ ಆವಶ್ಯಕತೆ ಇದ್ದರೂ, ಇದರಿಂದ ಕೆಲಸದ ಸಮಯ ಮತ್ತು ಶ್ರಮ ಉಳಿತಾಯವಾಗುತ್ತದೆ ಎಂಬುದು ಗೋಪಾಲಕೃಷ್ಣ ಶರ್ಮರ ಅಭಿಪ್ರಾಯವಾಗಿದೆ.

ವಿ.ಸೂ. ಇದನ್ನು ಈ ಬಾರಿಯ ದ್ವಿತೀಯ NIF ಸ್ಪರ್ಧೆಗೆ ಕಳುಹಿಸಲಾಗಿದೆ, ಆಸಕ್ತರು ಶ್ರೀ ಗೋಪಾಲಕೃಷ್ಣ, ಸರವು ಮನೆ, ಕಾಸರಗೋಡು ಜಿಲ್ಲೆ ಇವರನ್ನು ಸಂಪರ್ಕಿಸಬಹುದು.

ರೈತರೊಬ್ಬರಿಂದ ಹೊಸ ಅಡಿಕೆ ತಳಿಯ ಸಂವರ್ಧನೆ

ಬಹುತೇಕ ಅಡಿಕೆ ತಳಿಗಳು ಉದ್ದ ಬೆಳೆಯುವಂತಹವು, ಅಡಿಕೆ ಮರ ತುಂಬಾ ಉದ್ದ ಇರುವುದರಿಂದ ಅಡಿಕೆ ಕಟಾವು, ಸಸ್ಯ ಸಂರಕ್ಷಣೆ ಕಷ್ಟಕರ. ಈ ಸಮಸ್ಯೆಗೊಂದು ಪರಿಹಾರವಾಗಿ ಹೀರೇಹಳ್ಳಿ ಗಿಡ್ಡ ತಳಿಯ ಆವಿಷ್ಕಾರವಾಯಿತು ಆದರೆ ಅದರ ಇಳುವರಿ ಗಣನೀಯವಾಗಿ ಕುಂಠಿತವಾಗಿದೆ. ಇವೆಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸಿದ ದಕ್ಷಿಣ ಕನ್ನಡ ಜಿಲ್ಲೆಯ, ಪಲತಡ್ಕದ ನಾರಾಯಣ ಭಟ್‌ರವರು ತಮ್ಮ ಹೊಲದಲ್ಲೇ ಸಂಶೋಧನೆ ಮಾಡಿ, ಅಧಿಕ ಇಳುವರಿ ನೀಡುವ ಗಿಡ್ಡ ತಳಿಯನ್ನು ಹೊರ ತಂದಿದ್ದಾರೆ ಎಂದರೆ ನಮ್ಮ ಕೃಷಿ ಸಂಸ್ಥೆಯ ವಿಜ್ಞಾನಿಗಳು ಬೆರಗಾಗಬೇಕಿದೆ.



50 ರಿಂದ 60 ಅಡಿ ಎತ್ತರ ಬೆಳೆವ ಮರವೊಂದು ಸರಾಸರಿ 4 - 5 ಗೊನೆಗಳ ಇಳುವರಿ ನೀಡುವ ನಾಟೀ 'ನೀಳ ತಳಿ' ಅಡಿಕೆ ಮತ್ತು 20 ರಿಂದ 25 ಅಡಿ ಎತ್ತರ ಬೆಳೆವ ಮರವೊಂದು ಸರಾಸರಿ 1-2 ಗೊನೆಗಳ ಇಳುವರಿ ನೀಡುವ 'ಹೀರೇ ಹಳ್ಳಿ ಗಿಡ್ಡ ತಳಿ' ನಡುವೆ ಕೃತಕ ಪರಾಗಸ್ಪರ್ಶ ಕ್ರಿಯೆ ನಡೆಸಿ, ಅಧಿಕ ಇಳುವರಿ ನೀಡುವ ಹೈಬ್ರಿಡ್ ಗಿಡ್ಡ ತಳಿಯನ್ನು ಇವರು ಅಭಿವೃದ್ಧಿ ಪಡಿಸುತ್ತಿದ್ದಾರೆ.

(ವಿಶೇಷ ಸೂಚನೆ:

ಸಂಶೋಧನಾ ಕೇಂದ್ರಗಳಿಂದ ಹೊರಬರುವ ಹೈಬ್ರಿಡ್ ತಳಿಗಳ ಸೂಕ್ತತೆಯನ್ನು 'ಹಿತ್ತಲಗಿಡ' ಎಚ್ಚರಿಕೆಯಿಂದ ಗಮನಿಸಿ ತೀರ್ಮಾನ ತೆಗೆದುಕೊಳ್ಳುತ್ತಿದೆ. ನಮ್ಮ ರಾಜ್ಯದ ಬಹುತೇಕ ಸಾವಯುವ ಕೃಷಿಕರು ಮತ್ತು ಈ ಬಗ್ಗೆ ಪ್ರಯತ್ನಿಸುತ್ತಿರುವ ಸಂಘಟನೆಗಳು ಹೈಬ್ರಿಡ್ ತಳಿಗಳನ್ನು ವಿರೋಧಿಸುತ್ತಿರುವವರು. ಕಾರಣ, ಈ ಹೈಬ್ರಿಡ್ ತಳಿಗಳೇ ಹಸಿರು ಕ್ರಾಂತಿಯ ಕೇಂದ್ರ ಅಂಶವಾಗಿದ್ದು, ಇದರ ಮೂಲಕವೇ ಆ ರಾಸಾಯನಿಕ ದುಭಾರಿ ಕೃಷಿಯ ನಿರ್ಮಾಣವಾಗಿರುತ್ತದೆಂಬುದು ಬಹು ಜನರ ಅಭಿಪ್ರಾಯ. ಇನ್ನು ಜೀವ ವಿವಿಧತೆ ವಿಚಾರದಲ್ಲಂತೂ ಈ ಹೈಬ್ರಿಡ್‌ಗಳು ನಮ್ಮ ನಾಟಿ ತಳಿಗಳ ಉಳಿವಿಗೇ ಸಂಚಕಾರ ತಂದಿರುವುದು ಚಾರಿತ್ರಿಕ ಸತ್ಯ. ಆದರೆ ನಮ್ಮ ರಾಜ್ಯದ ಸಾವಯುವ ಕೃಷಿ ಋಷಿಗಳಲ್ಲೊಬ್ಬರಾದ ಸೋರೆ ಹುಣಸೆ ನಾರಾಯಣ ರೆಡ್ಡಿಯವರು ಈ ಹೈಬ್ರಿಡ್ ತಳಿಗಳನ್ನು ಬಹಿರಂಗವಾಗಿ ಒಪ್ಪಿ ಇದನ್ನೂ ಸಾವಯುವ ಕೃಷಿ ಪ್ರಯೋಗದೊಳಗೆ ತರುವ ಅತ್ಯಂತ ವ್ಯವಹಾರಿಕ ದಾರಿ ಕಂಡುಕೊಂಡಿರುವವರು. ಈ ಎಲ್ಲಾ ಅಂಶಗಳನ್ನು ಗಮನಿಸಿದರೂ ಭಟ್ಟರ ಇಂದಿನ ಅಡಿಕೆ ತಳಿ ಪ್ರಯೋಗವನ್ನು ಹಿತ್ತಲ ಗಿಡ ಪ್ರಕಟಿಸಲು ಮುಖ್ಯ ಕಾರಣವೆಂದರೆ ಇದು ರೈತ ಮೂಲದಿಂದೆದ್ದ ಅನುಶೋಧನೆ. ಇದು ನಮ್ಮ ನಾಟೀ ತಳಿಗಳ ಉಳಿವಿಗೆ ಕಂಟಕ ತರದು ಮತ್ತು ರಾಸಾಯನಿಕ ಕೃಷಿಗೆ ಪ್ರೇರಣೆ ನೀಡದು ಎಂಬ ವಿಶ್ವಾಸದಿಂದ ಇದನ್ನು ಪ್ರೋತ್ಸಾಹಿಸಲಾಗಿದೆ. ನಮ್ಮ ಹಿತ್ತಲ ಗಿಡ ಬಳಗದ ಸದಸ್ಯರಿಂದ ಈ ನಿಟ್ಟಿನಲ್ಲಿ ಪ್ರತಿಕ್ರಿಯೆ ನಿರೀಕ್ಷಿಸಲಾಗಿದೆ - ಸಂಪಾದಕರು).

ಬಾಳೇಕಾಯಿ ಹಣ್ಣಾಗಿಸಲು

ಸಾಮಾನ್ಯವಾಗಿ ಬಾಳೇ ಕಾಯಿಗೊನೆಯನ್ನು ಹಣ್ಣಾಗುವ ಮೊದಲೇ ಕಿತ್ತು ತಂದು ರಾಸಾಯನಿಕ ಅನಿಲ ಬಳಸಿ ಕಾಯಿಯನ್ನು ಬೇಗ ಹಣ್ಣಾಗಿಸಿ ಮಾರಾಟ ಮಾಡುತ್ತಾರೆ. ಆದರೆ ಈ ರೀತಿ ಹಣ್ಣಾದ ಹಣ್ಣುಗಳು ಅಷ್ಟು ರುಚಿಯಾಗಿರುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯ ಚೆನ್ನಪ್ಪ ಗೌಡರು, ಬಾಳೆ ಗೊನೆಯನ್ನು ಒಂದು ಮಣ್ಣಿನ ಮಡಕೆಯಲ್ಲಿ ಹಾಕಿ, ಗೊನೆಯ ಕೆಳಗೆ ಮತ್ತು ಮೇಲೆ ಭತ್ತದ ಹುಲ್ಲನ್ನು ತುಂಬುತ್ತಾರೆ, ನಂತರ ಮಡಕೆಯ ಬಾಯಿಗೆ ಹೊಂದಿಕೆಯಾಗುವಂತಹ ಮತ್ತೊಂದು ಸಣ್ಣ ಮಡಿಕೆಯನ್ನು ಮುಚ್ಚಿ, ಈ ಸಣ್ಣ ಮಡಿಕೆಯಲ್ಲಿ ಇದ್ದಿಲನ್ನು ಹಾಕಿ, ಸುಡುತ್ತಾರೆ. ಈ ಪದ್ಧತಿಯಿಂದ ಬಾಳೇಕಾಯಿ ಬೇಗ ಹಣ್ಣಾಗುವುದಲ್ಲದೆ ರುಚಿಯೂ ಚೆನ್ನಾಗಿರುತ್ತದೆ ಎಂಬುದು ಚೆನ್ನಪ್ಪಗೌಡರ ಅನುಭವ.

ತುಮಕೂರು ಜಿಲ್ಲೆ ಶಿರಾ ತಾಲ್ಲೂಕು, ಪಟ್ಟನಾಯಕನ ಹಳ್ಳಿಯ ಗೋವಿಂದಪ್ಪನವರು, ಬಾಳೇ ಕಾಯಿಗಳನ್ನು ಹಣ್ಣು ಮಾಡಲು ಮತ್ತೊಂದು ಸುಲಭೋಪಾಯ ಅನುಸರಿಸುತ್ತಾರೆ. ಬಾಳೇಗೊನೆಯನ್ನು ಒಂದು ಮೂಟೆಯಲ್ಲಿ ಹಾಕಿ, ಬೇವಿನ ಸೊಪ್ಪಿನ ಹೊದಿಕೆ ಹಾಕಿ, ಮೂಟೆಯ ಬಾಯಿಯನ್ನು ಬಿಗಿಯಾಗಿ ಕಟ್ಟುತ್ತಾರೆ, ಮೂರು ನಾಲ್ಕು ದಿನಗಳಲ್ಲಿ ಬಾಳೇ ಹಣ್ಣು ತಿನ್ನಲು ಸಿದ್ಧವಾಗಿರುವುದಲ್ಲದೆ, ಈ ಪದ್ಧತಿಯಿಂದ ಹಣ್ಣುಗಳು ಕೊಳೆಯುವ ಸಾಧ್ಯತೆ ಇರುವುದಿಲ್ಲ ಎನ್ನುವುದು ಗೋವಿಂದಪ್ಪನವರ ಅನುಭವ.


ತುಮಕೂರು ಜಿಲ್ಲೆಯ ಕೆರೆಯಾಗಲ ಹಳ್ಳಿ ಕಂಠಪ್ಪನವರು ಬಾಳೇಕಾಯಿ ಹಣ್ಣು ಮಾಡಲು ಸುಣ್ಣ ಬಳಸುತ್ತಾರೆ. ಸುಣ್ಣವನ್ನು ನೀರಿನೊಂದಿಗೆ ಕಲಸಿ, ತೆಳು ದ್ರಾವಣವನ್ನಾಗಿಸಿ, ಸುಣ್ಣದ ನೀರನ್ನು ಬಾಳೇ ಕಾಯಿಗಳಿಗೆ ತೆಳುವಾಗಿ ಸವರುತ್ತಾರೆ, ನಂತರ ಬಾಳೇಕಾಯಿ ಚಿಪ್ಪುಗಳನ್ನು ಗೊನೆಯಿಂದ ಬೇರ್ಪಡಿಸಿ, ಒಂದು ಡಬ್ಬದಲ್ಲಿ ಹಾಕಿ ಮುಚ್ಚಳ ಮುಚ್ಚುತ್ತಾರೆ. ಮೂರರಿಂದ ನಾಲ್ಕು ದಿನಗಳಲ್ಲಿ ಬಾಳೇಕಾಯಿ ಹಣ್ಣಾಗಿರುತ್ತದೆ ಎಂಬುದು ಕಂಠಪ್ಪನವರ ಅನುಭವ.

(ವಿ.ಸೂ. ಬಾಳೇಕಾಯಿ ಹಣ್ಣಾಗಿಸುವ ಮೂರು ಕ್ರಮಗಳೂ ಕೃತಕವೂ, ಅಸಹಜವೂ ಆಗಿದ್ದರೂ ಅವುಗಳು ರಾಸಾಯನಿಕ ಮುಕ್ತ ಕ್ರಮಗಳು ಹಾಗೇ, ಬಹು ದಿನದಿಂದ ನಡೆದುಕೊಂಡು ಬಂದಿರುವ ದೇಸೀ ಕ್ರಮಗಳು. ಏರುತ್ತಿರುವ ಬೇಡಿಕೆಗೆ ಸ್ವಲ್ಪ ಅನಿವಾರ್ಯ ಇರಬಹುದು ಎಂಬ ಕಾರಣಕ್ಕೆ ಹಿತ್ತಲಗಿಡ ಈ ರೀತಿಯ ರೈತ ಮೂಲದ ಶೋಧನೆಗಳಿಗೆ ಪ್ರೋತ್ಸಾಹ ನೀಡುತ್ತಿದೆ - ಸಂಪಾದಕರು).

ನುಸಿಪೀಡೆಗೊಂದು ಪರಿಣಾಮಕಾರಿ ಪ್ರಯೋಗ

ನುಸಿ ಕೀಟವು ದೇಶದಾದ್ಯಂತ ರೈತರನ್ನು ಕಂಗಾಲಾಗಿಸಿ ತೆಂಗಿನ ಬೆಳೆಗೆ ಸಾಕಷ್ಟು ಹಾನಿ ಉಂಟು ಮಾಡುತ್ತಿದೆ. ತಮಿಳುನಾಡು ರಾಜ್ಯದ, ಕನ್ಯಾಕುಮಾರಿಯ ಹೆನ್ರಿಲಿಸ್ ರವರು ನುಸಿ ಕೀಟ ಹತೋಟಿಗೆ ಸಸ್ಯ ಔಷಧಿ ಒಂದನ್ನು ಕಂಡುಹಿಡಿದಿದ್ದಾರೆ. ಈ ಸಸ್ಯ ಔಷಧಿ ತಯಾರಿಸಲು ಹತ್ತು ಗಿಡಗಳನ್ನು ಬಳಸಲಾಗಿದೆ, ವಜ್ರ ನೀಲಿ (*Tephrosia pupurea*), ಲಕ್ಕೆ (*Vitex negundo*), ಪಾದ್ರಿ/ಲಾಂಟಾನ (*Lantana kamara*), ಕಾಶಿಕಣಗಲು (*Vinca rosea*), ಹೊಂಗೆ (*Pongamia pinnata*), ಸೀತಾಫಲ (*Anona squamosa*), ಅರಿಶಿಣ (*Curcuma longa*), ಬೇವು (*Azarirachta indica*), ಬೆಳ್ಳುಳ್ಳಿ (*Allium sativum*) ಹಾಗೂ ತಂಗಟೆ (*Cassia auriculata*). ಈ ಎಲ್ಲಾ ಸಸ್ಯಗಳನ್ನು ಸಮ ಪ್ರಮಾಣದಲ್ಲಿ ಸೇರಿಸಿ ಕಷಾಯ ತಯಾರಿಸುತ್ತಾರಂತೆ. ಈ ಸಸ್ಯ ಔಷಧಿಯು ಪ್ರಕೃತಿಗೆ ಸ್ನೇಹ ಪರವಾಗಿದ್ದು ಅನೇಕ ಕೀಟಗಳನ್ನು ಹತೋಟಿ ಮಾಡುತ್ತದೆ.

ತೆಂಗನ್ನು ಬಾಧಿಸುವ ನುಶಿ



ತೆಂಗಿನ ಕಾಯಿಯನ್ನು ಸಂಪೂರ್ಣ ನಾಶ ಮಾಡುವ ನುಸಿ

ಕೀಟಗಳಿಗೆ ವಿಕರ್ಷಕ ವಸ್ತುವಾಗಿ ಇದು ಕಾರ್ಯ ನಿರ್ವಹಿಸುತ್ತದೆ. ಈ ಗಿಡ ಮೂಲಿಕೆಯನ್ನು ಬಳಸಿ ಹೂ ಕೋಸಿನ, ಎಲೆ ಕೋಸಿನ ಕೀಟಗಳನ್ನು ಹಾಗೂ ಹತ್ತಿಯ, ತೊಗರಿಯ ಮತ್ತು ಹರಳು ಗಿಡಗಳಿಗೆ ನಾಶ ಮಾಡುವ ಕಾಯಿಕೊರಕ ಹುಳುಗಳನ್ನು ನಿಯಂತ್ರಿಸಬಹುದಾಗಿದೆ.

ಮೆಣಸಿನ ಕಾಯಿಯಲ್ಲಿ ಕಪ್ಪು ಚಿಟ್ಟೆ ಬಾಧೆ ನಿಯಂತ್ರಣ

ಗುಜರಾತಿನ ದಾಹುದ್ ಪ್ರದೇಶದಲ್ಲಿ ಮೆಣಸಿನ ಕಾಯಿ ಗಿಡಗಳ ಎಲೆ ತಿನ್ನುವ ಕಪ್ಪು ಚಿಟ್ಟೆ (*Spodoptera liteura*) ಯನ್ನು ನಿಯಂತ್ರಿಸಲು ಕಪುರಿಬೆನ್ ಚೌಹಾನ್ ಅವರು ಗುಜರಾತಿಯಲ್ಲಿ ಕಡ ಎನ್ನುವ ಗಿಡದ (*Picrorhiza kurrvoa*) ಎಲೆಗಳನ್ನು ಉಪಯೋಗಿಸುತ್ತಾರಂತೆ. ಮೆಣಸಿನ ಗಿಡಗಳನ್ನು ಹೊಲಕ್ಕೆ ನಾಟಿ ಮಾಡಿದ ನಂತರ, ಕಡದ ಎಲೆಗಳನ್ನು, ಮೆಣಸಿನ ಸಾಲುಗಳ ಮಧ್ಯೆ ಹರಡುತ್ತಾರೆ. ಕಡದ ಎಲೆಗಳು ಕಹಿಯಾಗಿರುವುದರಿಂದ ಕಪ್ಪು ಚಿಟ್ಟೆಗಳು ದೂರ ಸರಿಯುತ್ತವಂತೆ ಮತ್ತು ಎಲೆಗಳು ನೆಲಕ್ಕೆ ಹೊದಿಕೆಯಾಗುವುದರಿಂದ ಮಣ್ಣಿನಲ್ಲಿ ತೇವಾಂಶವನ್ನು ಕಾಯ್ದಿರಿಸಿಕೊಂಡಂತಾಗುತ್ತದೆ ಎಂಬುದು ಕಪುರಿಬೆಹೆನ್ ಚೌಹಾನ್ ಅವರ ಅಭಿಪ್ರಾಯವಾಗಿದೆ.

ತಂಬಾಕಿನಿಂದ ಕೀಟ ನಿಯಂತ್ರಣ

ರೈತರು ಹಿಂದಿನ ಕಾಲದಿಂದಲೂ ವಿವಿಧ ಬೆಳೆಗಳಲ್ಲಿ ಕೀಟ ಹತೋಟಿ ಮಾಡಲು ತಂಬಾಕಿನ ಕಷಾಯವನ್ನು ಬಳಸುತ್ತಾರೆ. ಪಶ್ಚಿಮ ಬಂಗಾಳದ, ಜನಿಯ ಗ್ರಾಮದ ಅಶ್ವಿನಿ ಮಂದಾಲ್ ಅವರು, ಹೂ ಕೋಸಿನ ಬೆಳೆಯಲ್ಲಿ ಬರುವ ವಜ್ರ ಬೆನ್ನಿನ ಹುಳು (*Plutella maculipennis*), ಕಂಬಳಿ ಹುಳು (*Diacrisia obliqua*) ಮುಂತಾದ ಕೀಟಗಳನ್ನು ನಿಯಂತ್ರಿಸಲು ತಂಬಾಕಿನ ಕಷಾಯವನ್ನು ಉಪಯೋಗಿಸುತ್ತಾರಂತೆ.


ಭತ್ತದ ಬೆಳೆಯಲ್ಲಿ ಕೀಟ ರೋಗ ನಿಯಂತ್ರಣ

ಪಶ್ಚಿಮ ಬಂಗಾಳದ ಮಿಡನಾಪುರ ಜಿಲ್ಲೆಯ ರೈತರು ಭತ್ತದ ಜಿಗಿ ಹುಳು (*Dicladispa armigera*) ಮತ್ತು ಕಂದು ಮಚ್ಚೆ ರೋಗ (*Drechslera oryzae*)ವನ್ನು ನಿಯಂತ್ರಿಸಲು ಗುಜರಾತಿ ಭಾಷೆಯಲ್ಲಿ ಪೊರಾಸಿ (*Cleistanth collinus*) ಎಂದು ಕರೆಯುವ ಗಿಡದ ಬಲಿತು ಉದುರಿದ ಎಲೆಗಳನ್ನು ಸಂಗ್ರಹಿಸಿ, ಹೊಲದಲ್ಲಿ ಹರಡುತ್ತಾರೆ. (ಎಕರೆಗೆ ಒಂಭತ್ತರಿಂದ ಹತ್ತು ಎಲೆಗಳು) ನಂತರ ಮೂರು ದಿನಗಳವರೆಗೆ ಎಲೆ ಹರಡಿದ ಹೊಲಕ್ಕೆ ನೀರು ಹಾಯಿಸುವುದಿಲ್ಲ. ಈ ಪದ್ಧತಿಯಿಂದ ಮಿಡನಾಪುರದ ರೈತರು ಉತ್ತಮ ಫಲಿತಾಂಶಗಳನ್ನು ಕಂಡಿದ್ದಾರಂತೆ.

ಮೂಲ: ಹನಿಬೀ 12(3), ಜು-ಸೆಂ, 2001

ತೆಂಗಿನ ಮರದ ಕೆಂಪು ದುಂಬಿಗಳ ನಿಯಂತ್ರಣಕ್ಕೊಂದು ಹೊಸ ಪ್ರಯೋಗ.

ತಮಿಳುನಾಡಿನ ಅಂಬಸಮುದ್ರಂ ಪ್ರದೇಶದಲ್ಲಿ ಕೆಂಪು ದುಂಬಿಗಳ ಕಾಟದಿಂದ ರೈತರು ಕಂಗಾಲಾಗಿದ್ದರು. ಸರ್ಕಾರ ಶಿಫಾರಸ್ಸು ಮಾಡಿದ ಎಲ್ಲಾ ಹತೋಟಿ ಕ್ರಮಗಳೂ ವಿಫಲವಾಗಿ, ರೈತರು ವರ್ಷಕ್ಕೆ 50-60 ಮರಗಳನ್ನು ಕಳೆದುಕೊಳ್ಳುವಂಥಹ ಸ್ಥಿತಿಯನ್ನು ತಲುಪಿದ್ದರು. ಅಲ್ವಾರ್ ಕುರುಚಿ ತೋಟದಲ್ಲಿ 2500 ತೆಂಗಿನ ಮರಗಳ ನಿರ್ವಹಣೆ ನೋಡಿಕೊಳ್ಳುತ್ತಿದ್ದ ಶ್ರೀ ಗಣಪತಿ ಸುಂದರಂ ಎಂಬುವವರು ಈ ಸಮಸ್ಯೆಗೊಂದು ಪರಿಣಾಮಕಾರಿ ಪರಿಹಾರ ಕಂಡು ಹಿಡಿದಿದ್ದಾರೆ.



ಅವರು ಕೆಂಪು ದುಂಬಿಗಳ ಬಾಧೆಗೊಳಗಾಗಿರುವ ಯಾವುದಾದರೂ ಒಂದು ಮರವನ್ನು ನೆಲದಿಂದ ಮೇಲೆ 3-4 ಅಡಿ ಬಿಟ್ಟು ಕತ್ತರಿಸಿ, ಕತ್ತರಿಸಿದ ಭಾಗವನ್ನು ಸುಡುತ್ತಾರೆ. ನೆಲದ ಮೇಲ್ಭಾಗದಲ್ಲಿ ಉಳಿದ ಕಾಂಡದಿಂದ ಕೆಂಪು ಮಿಶ್ರಿತ ಕಂದು ರಸ ಸೋರುತ್ತದೆ. ಈ ರಸದ ವಾಸನೆಗೆ ಕೆಂಪು ದುಂಬಿಗಳು ಆಕರ್ಷಣೆಗೊಳಗಾಗಿ ಕತ್ತರಿಸಿದ ಮರದ ಬುಡದ ಬಳಿ ಬಂದು ಸೇರುತ್ತವೆ. ನಂತರ ಅವುಗಳನ್ನು ನಿರ್ಮೂಲನೆ ಮಾಡುತ್ತಾರೆ. ಕಾಲಕ್ರಮವಾಗಿ ಕತ್ತರಿಸಿದ ಮರದ ಕಾಂಡವನ್ನು ಆಗಿಂದಾಗ್ಗೆ ಓರೆಯಾಗಿ ಮತ್ತೆ ಕತ್ತರಿಸುತ್ತಿರುತ್ತಾರೆ. ಇದರಿಂದ ಹೆಚ್ಚು ರಸ ಸೋರಿ, ಹೆಚ್ಚು ಹುಳುಗಳು ಬಂದು ಸೇರುತ್ತವೆ. ಈ ರೀತಿ ಕತ್ತರಿಸಿದ ಒಂದು ಮರವು ಸುತ್ತಲಿನ ಸುಮಾರು 10 ಎಕರೆ ಪ್ರದೇಶದಿಂದ ಹುಳುಗಳನ್ನು ಆಕರ್ಷಿಸುತ್ತದೆ ಎಂಬುದು ತಮಿಳುನಾಡಿನ ಗಣಪತಿ ಸುಂದರಂ ಅವರ ಅನುಭವ.

ಮೂಲ: ಹನೀಬೀ 12(4) ಅ-ಡಿ, 2001

ಮಲೆನಾಡಿನ ಮದ್ದು : ಜೀವ ವಿವಿಧತೆ ಮತ್ತು ಮಹಿಳಾ ಸಮಾಗಮ

ಚಿಕ್ಕಮಗಳೂರು ಜಿಲ್ಲೆಯ, ಕೊಪ್ಪ ತಾಲ್ಲೂಕಿನ ಕುಡಿನೆಲ್ಲಿ ಗ್ರಾಮದ ಜ್ಯೋತಿ ಕೆ.ಜಿ. ಅವರು ತಮ್ಮ ಮನೆಯ ಹಿತ್ತಲಿನಲ್ಲಿ ಅನೇಕ ಔಷಧೀಯ ಸಸ್ಯಗಳನ್ನು ಸಂರಕ್ಷಿಸಿದ್ದಾರೆ ಮತ್ತು ಅವರ ತಾತ ಮುತ್ತಾತಂದಿರಿಂದ ಹಾಗೂ ನೆರೆಹೊರೆಯವರಿಂದ ಮಲೆನಾಡಿನ ಔಷಧೀಯ ಸಸ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ. ಅವರ ಜ್ಞಾನ ಸಂಗ್ರಹವನ್ನು ಹಿತ್ತಲಗಿಡದ ಮೂಲಕ ಹಂಚಿಕೊಳ್ಳಲು ಅವರು ಮುಂದಾಗಿರುವರು.

ಹೆದ್ದುಂಬೆ (*Lobelia nicotianaefolia*) : ಈ ಸಸ್ಯವು 6 ಅಡಿ ಎತ್ತರ ಬೆಳೆಯುತ್ತದೆ. ಉದ್ದವಾದ ಎಲೆಗಳನ್ನು ಹೊಂದಿದ್ದು, ಎಲೆಗಳು ಘಾಟು ವಾಸನೆಯನ್ನು ಹೊಂದಿರುತ್ತವೆ. ಬಿಳಿ ಬಣ್ಣದ ಹೂಗಳು ಗೊಂಚಲು ಗೊಂಚಲಾಗಿರುತ್ತವೆ.

ಶೀತದಿಂದ ನೆಗಡಿಯಾಗಿ, ಗಂಟಲು ನೋವಾದಾಗ ಹೆದ್ದುಂಬೆಯ ಬೇರನ್ನು ತಂದು, ತೊಳೆದು ಸ್ವಚ್ಛ ಮಾಡಿ, ಜಜ್ಜಿ ಕಣಕ ಮಾಡಿ ಗಂಟಲಿನ ಹೊರಭಾಗಕ್ಕೆ ಎರಡು, ಮೂರು ದಿನ ಲೇಪಿಸಲಾಗುತ್ತದೆ.

ಗಜ್ಜುಗ (*Caesalpinia crista*): ಇದು ಮುಳ್ಳುಗಳನ್ನು ಹೊಂದಿರುವ ಸಸ್ಯ, ಬಳ್ಳಿಯಾಗಿ ಹಬ್ಬುತ್ತದೆ. ಗಜ್ಜುಗದ ಕಾಯಿಯೊಳಗೆ ನುಣುಪಾದ ಗೋಲಿಯಾಕಾರದ ಬೀಜ ಇರುತ್ತದೆ.

ಬೀಜದ ಒಳಗಿನ ಬಿಳಿಯಾದ ಭಾಗವನ್ನು ತೆಗೆದು, ಅದನ್ನು ನೀರಿನಲ್ಲಿ ಕುದಿಸಿ ಕಷಾಯ ಮಾಡಿ, ಬಾಣಂತಿಯರಿಗೆ ನಂಜು ನಿವಾರಣೆಗೆ ಕುಡಿಸಲಾಗುತ್ತದೆ.

ಧಾರೆ ಮರ (*Averrhoa carambola*): ಇದು 20 ರಿಂದ 25 ಅಡಿ ಎತ್ತರ ಬೆಳೆಯುವ ಮರ. ಎಲೆಗಳು ಚಿಕ್ಕದಾಗಿದ್ದು ಗುಲಾಬಿ ಬಣ್ಣದ ಹೂ ಬಿಡುತ್ತದೆ ಮತ್ತು ಕಾಯಿಗಳು ಅರ್ಧ ಅಡಿ ಉದ್ದವಿದ್ದು ಐದು ಏಣುಗಳನ್ನು ಹೊಂದಿರುತ್ತವೆ. ಕಾಯಿಯು ಹಣ್ಣಾದಾಗ ಹಳದಿ ಬಣ್ಣವಿರುತ್ತದೆ. ಉಬ್ಬಸದ ತೊಂದರೆ ಇರುವವರು ಧಾರೆ ಮರದ ಕಾಯಿಯನ್ನು ಬಿಸಿ ಬೂದಿಯಲ್ಲಿ ಸುಟ್ಟು, ಜಜ್ಜಿ ಜೇನು ತುಪ್ಪದಲ್ಲಿ ಬೆರೆಸಿ ಸೇವಿಸಬಹುದು.

ಲಕ್ಕಿ (*Vitex nugundo*): ಗುಂಪು ಗುಂಪಾಗಿ ಬೆಳೆಯುವ ಈ ಸಸ್ಯವು 6 ರಿಂದ 12 ಅಡಿ ಎತ್ತರ ಬೆಳೆಯುತ್ತದೆ. ಕಾಂಡವು ತುಂಬಾ ಗಟ್ಟಿಯಾಗಿದ್ದು, ಎಲೆಯು ವಾಸನಾಯುಕ್ತವಾಗಿರುತ್ತದೆ. ಹೂಗಳು ನೀಲಿ ಬಣ್ಣವನ್ನು ಹೊಂದಿರುತ್ತವೆ.

ಹೆಣ್ಣು ಮಕ್ಕಳ ಹೊಟ್ಟೆ ನೋವಿಗೆ, ಲಕ್ಕಿ ಸೊಪ್ಪಿನ ಕಷಾಯ ಉತ್ತಮ ಔಷಧಿ ಮತ್ತು ಕಿವಿ ನೋವು ಇರುವವರು ಈ ಸೊಪ್ಪನ್ನು ತೆಂಗಿನ ಎಣ್ಣೆಯೊಂದಿಗೆ ಬೆರೆಸಿ, ಬಿಸಿ ಮಾಡಿ, 3-4 ಹನಿ ಎಣ್ಣೆಯನ್ನು ಕಿವಿಗೆ ಹಾಕಿಕೊಳ್ಳುತ್ತಾರೆ.

ಭೃಂಗರಾಜ (*Eclipta alba*) : ಈ ಸಸ್ಯವು ಹೇರಳವಾಗಿ ನೀರಿರುವ ಪ್ರದೇಶದಲ್ಲಿ ಹೆಚ್ಚು ಬೆಳೆಯುತ್ತದೆ ಮತ್ತು 1 ರಿಂದ 5 ಅಡಿ ಎತ್ತರ ಬೆಳೆಯುತ್ತದೆ. ಇದರ ಹೂಗಳು ಸಣ್ಣದಾಗಿದ್ದು ಹಳದಿ ಬಣ್ಣ ಹೊಂದಿರುತ್ತವೆ.

ಭೃಂಗರಾಜದ ಎಲೆಗಳನ್ನು ಎಣ್ಣೆಯೊಂದಿಗೆ ಕಾಯಿಸಿ ತೈಲ ಮಾಡಿ ಕೂದಲಿಗೆ ಹಚ್ಚುವುದರಿಂದ ಕೂದಲು ಕಪ್ಪಾಗಿ, ಹುಲುಸಾಗಿ ಬೆಳೆಯುತ್ತವೆ ಮತ್ತು ಉಷ್ಣದಿಂದ ಬಳಲುವವರು ಈ ಎಣ್ಣೆಯನ್ನು ತಲೆಗೆ ಹಚ್ಚುವುದರಿಂದ ದೇಹ ತಂಪಾಗುತ್ತದೆ.

ಕಾಕಿ ಗಿಡ (*Solanum nigrum*). ಈ ಸಸ್ಯವು 2-3 ಅಡಿ ಎತ್ತರ ಬೆಳೆಯುತ್ತದೆ. ಹಣ್ಣುಗಳು ಕಪ್ಪು ಅಥವಾ ತಿಳಿ ಕೆಂಪು ಬಣ್ಣ ಹೊಂದಿದ್ದು ಗೊಂಚಲಾಗಿ ಬಿಡುತ್ತವೆ.

ಕಾಕಿಗಿಡದ ಸೊಪ್ಪನ್ನು ಅರೆದು, ರಸ ತೆಗೆದು ಮಕ್ಕಳಿಗೆ ಹಚ್ಚಿ, ಸ್ನಾನ ಮಾಡಿಸುವುದರಿಂದ ಚರ್ಮದ ಸೋಂಕನ್ನು ತಡೆಗಟ್ಟಬಹುದು.

ಅಳಲೇಕಾಯಿ (*Terminalia chebula*): ಇದು ಎತ್ತರವಾಗಿ ಬೆಳೆಯುವ ಮರ. ಇದರ ಕಾಯಿಯು ಅಮಟೆಕಾಯಿ ಗಾತ್ರದಷ್ಟಿದ್ದು ಕಹಿಯಾಗಿರುತ್ತದೆ. ಕಾಯಿಯ ಒಳಗಡೆ ಒಂದೇ ಒಂದು ಬೀಜ ಇರುತ್ತದೆ.

ಕೆಮ್ಮು ಮತ್ತು ಜ್ವರ ನಿವಾರಣೆಗೆ, ಅಳಲೇಕಾಯಿ ಕಷಾಯ ಬಳಸುತ್ತಾರೆ ಮತ್ತು ಗಂಟಲು ನೋವಿಗೆ, ಈ ಕಾಯಿಯನ್ನು ಸುಟ್ಟು ಬೂದಿಯನ್ನು ನೀರಿನೊಂದಿಗೆ ಬೆರೆಸಿ ಗಂಟಲಿಗೆ ಹಚ್ಚಲಾಗುತ್ತದೆ.

ತಗ್ಗಿ (*Clerodendron phlomidis*): ಇದು 3 ರಿಂದ 4 ಅಡಿ ಎತ್ತರ ಬೆಳೆಯುವ ಸಸ್ಯ. ಎಲೆಯು ಅಗಲವಾಗಿರುತ್ತದೆ. ಇದರಲ್ಲಿ ಬಿಳಿ ಹೂಗಳು ಗೊಂಚಲಾಗಿ ಬಿಡುತ್ತವೆ. ಈ ಹೂಗಳು ಪರಿಮಳ ಹೊಂದಿರುತ್ತವೆ.

ಸಣ್ಣ ಮಕ್ಕಳಿಗೆ ತಂಡಿಯಾದರೆ ಇದರ ಎಲೆಯನ್ನು ಬೆಂಕಿಯಲ್ಲಿ ಕಾಯಿಸಿ, ಮಕ್ಕಳ ನೆತ್ತಿಯಲ್ಲಿ ಇಟ್ಟು ಬಟ್ಟೆಯಿಂದ ಕಟ್ಟುತ್ತಾರೆ. ಇದರಿಂದ ನೆತ್ತಿಯಲ್ಲಿನ ನೀರು ಆವಿಯಾಗಿ, ಶೀತ ವಾಸಿಯಾಗುತ್ತದೆ.

ಮುತ್ತುಗ (*Butea frondosa*): ಇದು ದೊಡ್ಡದಾದ ಮರವಾಗಿ ಬೆಳೆಯುತ್ತದೆ. ಎಲೆಗಳು ತುಂಬಾ ಅಗಲವಾಗಿರುತ್ತವೆ. ಚರ್ಮದ ಸೋಂಕಿಗೆ, ಹುಳುಕಡ್ಡಿಗೆ ಮುತ್ತುಗದ ಬೀಜವನ್ನು ತೇಯ್ದು ಹಚ್ಚಲಾಗುತ್ತದೆ.

ಮಜ್ಜಿಗೆ ಹಣ್ಣು (*Asparagus sp*): ಇದು 3 ರಿಂದ 8 ಅಡಿ ಬೆಳೆಯುವ ಗಿಡ. ಎಲೆಗಳು ಅಗಲವಾಗಿರುತ್ತವೆ, ಹೂಗಳು ಹಳದಿ ಬಣ್ಣ ಹೊಂದಿದ್ದು ಗೊಂಚಲಾಗಿ ಬಿಡುತ್ತವೆ.

ಈ ಗಿಡದ ಬೇರನ್ನು ತಲೆಯಲ್ಲಿ ಹೇನು ನಿವಾರಿಸಲು ಬಳಸುತ್ತಾರೆ. ಬೇರನ್ನು ಚೆನ್ನಾಗಿ ತೊಳೆದು ಕೊಬ್ಬರಿ ಎಣ್ಣೆಯೊಂದಿಗೆ ಕಾಯಿಸಿ ತಲೆಗೆ ಹಚ್ಚುತ್ತಾರೆ. ಮತ್ತು ಕಜ್ಜಿ ವಾಸಿ ಮಾಡಲು ಸಹ ಈ ಎಣ್ಣೆಯನ್ನು ಬಳಸಲಾಗುತ್ತದೆ.

ಸಂಗ್ರಹ: ಜ್ಯೋತಿ ಜಿ.ಕೆ. ಕುಡಿನೆಲ್ಲಿ ಕೊಪ್ಪ (ತಾಲ್ಲೂಕು),
ಚಿಕ್ಕಮಗಳೂರು (ಜಿಲ್ಲೆ)

ಮಂದಾಲ್‌ರ ಪ್ರಯೋಗ

ಪಶ್ಚಿಮ ಬಂಗಾಳದ ಜೇನಿಯ ಹಳ್ಳಿಯ ಶ್ರೀ ಅಶ್ವಿನಿ ಮಂದಾಲರು ತಮ್ಮ ಜಾನುವಾರುಗಳ ಆರೋಗ್ಯ ರಕ್ಷಣೆಯಲ್ಲಿ ಈ ಕೆಳಗಿನ ನಾಟೀ ಕ್ರಮಗಳನ್ನು ಅನುಸರಿಸುತ್ತಿರುವರು:

ಹಸುಗಳ ಬೇದಿ ನಿಯಂತ್ರಣಕ್ಕೆ ಬಿದಿರು:

ಹಸುಗಳಿಗೆ ಬೇದಿಯಾದಲ್ಲಿ ಬಿದಿರಿನ ಎಲೆಗಳನ್ನು ದಿನಕ್ಕೊಮ್ಮೆಯಂತೆ, ಬೆಳಗಿನ ವೇಳೆ ಬೇದಿ ನಿಲ್ಲುವವರೆಗೆ ತಿನ್ನಿಸಿದರೆ ಬೇದಿ ನಿಯಂತ್ರಿಸಬಹುದು.



ಅಥವಾ ಆಲದಮರದ ಮೇಲ್ಭಾಗದ ಬೇರುಗಳನ್ನು (ಹತ್ತರಿಂದ ಹನ್ನೆರಡು), ಒಂದು ಹಿಡಿ ಬಿದಿರಿನ ಎಲೆಗಳೊಂದಿಗೆ ಹಸುವಿಗೆ ತಿನ್ನಿಸುವುದರಿಂದ ಸಹ ಹಸುಗಳಲ್ಲಿ ಬೇದಿಯನ್ನು ನಿವಾರಿಸಬಹುದು ಎಂಬುದು ಮಂದಾಲ್ ಅವರ ಅನುಭವವಾಗಿದೆ.

ಹಸುಗಳಲ್ಲಿ ಆಗಾಗ ಜ್ವರದ ಭಾಧೆಯೆ?

ಕೆಲವೊಮ್ಮೆ ಹಸುಗಳಲ್ಲಿ ಆಗಾಗ ಜ್ವರ ಕಾಣಿಸಿಕೊಂಡು ಕೆಚ್ಚಲು ಊದಿಕೊಳ್ಳುತ್ತದೆ ಮತ್ತು ಹಸು ನಡೆಯುವಾಗ ಕುಂಟುತ್ತದೆ ಹಾಗೂ ಸನ್ನಿಯಾಗುತ್ತದೆ. ಇಂಥಹ ಜ್ವರ ನಿವಾರಿಸಲು 21 ಕರಿಮೆಣಸು ಮತ್ತು 21 ಕಿತ್ತಲೆ ಹಣ್ಣಿನ ಎಲೆಗಳನ್ನು ಕುಟ್ಟಿ, ಪುಡಿ ಮಾಡಿ ನೀರಿನೊಂದಿಗೆ ಬೆರೆಸಿ ದಿನಕ್ಕೊಮ್ಮೆಯಂತೆ ಹಸುಗಳಿಗೆ ಕುಡಿಸಬೇಕು ಅಥವಾ 50 ಗ್ರಾಂ, ಕರಿ ಮೆಣಸಿನ ಪುಡಿಯನ್ನು ತುಪ್ಪದೊಂದಿಗೆ ಬೆರೆಸಿ, ಸ್ವಲ್ಪ ಕಾಯಿಸಿ ಹಸುಗಳಿಗೆ ತಿನ್ನಿಸುವುದರಿಂದ ಸಹ ಜ್ವರ ಹೋಗಲಾಡಿಸಬಹುದು.

ಕಾಲುಬಾಯಿ ರೋಗ ತಡೆಗಟ್ಟುವ ಮತ್ತು ನಿವಾರಿಸಲು

ನಿಮ್ಮ ಹಸುಗಳು ಕಾಲುಬಾಯಿ ರೋಗದಿಂದ ಬಳಲುತ್ತಿವೆಯೇ?, ನಿಮ್ಮ ಊರಿನ ಕೆರೆ ಅಥವಾ ನದಿ ದಂಡೆಯ ಒದ್ದೆ ಮಣ್ಣಿನ ಮೇಲೆ ಪ್ರತಿದಿನ ಮೂರು ಅಥವಾ ನಾಲ್ಕು ಬಾರಿ ನಡೆಸಿ, ಮತ್ತೇ ಈ ಸೋಂಕು ತಗುಲಿ ಕ್ರಿಮಿ ಕೀಟಗಳ ಬಾಧೆ ಕಂಡು ಬಂದರೆ ಪೆಟ್ರೋಲ್ ಹಚ್ಚಬಹುದು ಮತ್ತು ಇದರಿಂದ ಕೊಟ್ಟಿಗೆಯ ನೈರ್ಮಲ್ಯ ಕಾಪಾಡಬಹುದು.

ಇತರೆ ಹಸುಗಳಿಗೆ ಕಾಯಿಲೆ ಹರಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಮೌರಾಲ (*Amblypharyngodon mola*) ತಳಿಯ ಮೀನನ್ನು ಬಿದಿರಿನ ಎಲೆಯಲ್ಲಿ ಸುತ್ತಿ ತಿನ್ನಿಸಲಾಗುತ್ತದೆಯಂತೆ! ಹಾಗೇ ಕೊಟ್ಟಿಗೆಯ ಬಾಗಿಲಲ್ಲಿ ಚದಿರಬಳ್ಳಿ(*Euphorbia antiquorum*)ಯ ರೆಂಬೆಗಳನ್ನು ನೇತು ಹಾಕಬಹುದು. ಈ ಎಲ್ಲಾ ಪದ್ಧತಿಗಳ ಮೂಲಕ ಹಸುಗಳ ಕಾಲುಬಾಯಿ ರೋಗವನ್ನು ಅಶ್ವಿನಿ ಮಂದಾಲ್‌ರವರು ಸಮಗ್ರವಾಗಿ ನಿಯಂತ್ರಿಸುತ್ತಿದ್ದಾರಂತೆ.

ಹಸುಗಳಲ್ಲಿ ಶಕ್ತಿ ವರ್ಧಿಸಲು

ದೇಶೀಯ ಹತೋಟಿಯಲ್ಲಿ ಅಶ್ವಿನಿ ಮಂದಾಲ್ ಅವರು ವಿವಿಧ ಬೆಳೆಗಳಲ್ಲಿ ಕೀಟ ನಿಯಂತ್ರಿಸಲು ತಂಬಾಕಿನ ಕಷಾಯವನ್ನು ಸಿಂಪಡಿಸುವ ಬಗ್ಗೆ ತಿಳಿಸಿದ್ದೇವೆ. ಅವರು ತಂಬಾಕಿನ ಎಲೆಗಳಿಂದ ರಸವನ್ನು ಸೋಸಿದ ನಂತರ ಉಳಿಯುವ ತಂಬಾಕಿನ ಎಲೆಗಳನ್ನು, ತುಪ್ಪದಲ್ಲಿ ಹಾಕಿ ಸ್ವಲ್ಪ ಬಿಸಿ ಮಾಡಿ ನಂತರ ಕರಿ ಮೆಣಸಿನ ಪುಡಿಯನ್ನು ಸೇರಿಸಿ ಎತ್ತುಗಳಿಗೆ ತಿನ್ನಿಸುತ್ತಾರೆ. ಇದರಿಂದ ಎತ್ತುಗಳಲ್ಲಿ ನೇಗಿಲು ಎಳೆಯಲು ಶಕ್ತಿ ವರ್ಧಿಸುತ್ತದೆ ಎಂಬುದು ಅವರ ಅನುಭವ.

ಮೂಲ: ಹನಿಜೀ, 12(3), ಜು-ಸೆಂ., 2001

ಕೊಪ್ಪಾದ ಜ್ಯೋತಿಯ ಜ್ಞಾನ

ಹಸುಗಳಿಗೆ ಹಾವು ಕಡಿದಾಗ:

ಚಿಕ್ಕಮಗಳೂರು ಜಿಲ್ಲೆಯ ರೈತರು, ಹಸುಗಳಿಗೆ ಹಾವು ಅಥವಾ ಬೇರೆ ವಿಷಜಂತುಗಳು ಕಡಿದಾಗ, ಹೆದ್ದುಂಬೆ [*Lobelia nicotianaefolia*) ಎಲೆಯನ್ನು ತಂದು, ತೊಳೆದು, ಚೆನ್ನಾಗಿ ಜಜ್ಜಿ ಅದರ ರಸವನ್ನು ಹಸುವಿನ ಮೂಗಿಗೆ ಹಿಂಡುತ್ತಾರೆ. ಇದರಿಂದ ವಿಷ ಕಡಿಮೆಯಾಗುತ್ತದೆ. ನಂತರ ಮುಂದಿನ ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳುತ್ತಾರೆ.

ದನಗಳ ಕೀಲು ನೋವಿಗೆ:



ದನ ಕರುಗಳಿಗೆ ಕಾಲು ಉಳುಕಿದಂತಾಗಿ, ಕೀಲು ನೋವಾದಾಗ, ಮಲೆನಾಡಿನ ರೈತರು, ಲಕ್ಕಿ (*Vitex nugundo*) ಸೊಪ್ಪನ್ನು ಮೆಣಸಿನಕಾಳು ಮತ್ತು ಅಕ್ಕಿಯೊಂದಿಗೆ ಅರೆದು ಅದನ್ನು ಹುತ್ತದ ಮಣ್ಣಿನಲ್ಲಿ ಬೆರೆಸಿ ನೋವಾದ ಜಾಗಕ್ಕೆ ಹಚ್ಚುತ್ತಾರೆ. ನೋವು ತೀವ್ರವಾಗಿದ್ದರೆ, ಹಸಿಬಟ್ಟೆಯಿಂದ ಈ ಮಿಶ್ರಣದ ಕಟ್ಟು ಹಾಕುತ್ತಾರೆ.

ದನಗಳ ಕಾಲು ಹುಣ್ಣಿನ ನಿವಾರಣೆ:

ದನಗಳ ಕಾಲಿನಲ್ಲಿ ಹುಣ್ಣಾಗಿ, ಕೆಲವೊಮ್ಮೆ ಹುಳು ಸಹ ಬೀಳುತ್ತವೆ. ಕೊಪ್ಪಾ ತಾಲ್ಲೂಕಿನ ರೈತರು ಇಂಥಹ ಹುಣ್ಣನ್ನು ನಿವಾರಿಸಲು ಅಳಲೇಕಾಯಿ (*Terminalia chebula*) ಯನ್ನು ಸುಟ್ಟು ತಣ್ಣಗಾದ ನಂತರ ಅದನ್ನು ಪುಡಿ ಮಾಡಿ ಹುಣ್ಣಿಗೆ ಹಚ್ಚುತ್ತಾರೆ.

ಸಂಗ್ರಹ: ಕೆ.ಜಿ. ಜ್ಯೋತಿ, ಕುಡಿನೆಲ್ಲಿ, ಚಿಕ್ಕಮಗಳೂರು (ಜಿಲ್ಲೆ)

ಸಾವಯವ ಕೃಷಿಕರ ಸಮಾವೇಶಗಳು

- ತಾ. 29-12-2001ರಂದು ಬೆಂಗಳೂರಿನ ಕೃಷಿ ತಂತ್ರಜ್ಞಾನ ಸಂಸ್ಥೆ (ಐಎಟಿ)ಯಲ್ಲಿ ಸಾವಯವ ಕೃಷಿಕರ ಸಮಾವೇಶ ನಡೆದಿದ್ದು ನಮ್ಮ ಹಿತ್ತಲಗಿಡದ ವಿಶೇಷ ವ್ಯಕ್ತಿಯಾಗಿರುವ ಶ್ರೀ ಬಸವರಾಜು ಸಂತೇಶಿವರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯದ ವಿವಿಧ ಪ್ರದೇಶಗಳಿಂದ ಸಾವಯವ ಕೃಷಿಕರು ಈ ಕಾರ್ಯಕ್ರಮಕ್ಕೆ ಬಂದಿದ್ದರು. ಸಾವಯವ ಕೃಷಿಗೆ ಸಂಬಂಧಪಟ್ಟಂತೆ ಒಂದು ವಸ್ತು ಪ್ರದರ್ಶನವನ್ನೂ ಏರ್ಪಡಿಸಲಾಗಿತ್ತು ಮತ್ತು ಸಾವಯವ ಕೃಷಿಕರಿಗೆ ತಮ್ಮ ಕೃಷಿ ಅನುಭವಗಳನ್ನು ಹಂಚಿಕೊಳ್ಳಲು ಮುಕ್ತವೇದಿಕೆಯನ್ನು ಒದಗಿಸಲಾಗಿತ್ತು.

- ಬೆಂಗಳೂರು ಗ್ರಾಮಾಂತರ ಸಾವಯವ ಕೃಷಿಕರ ಬಳಗ "ಸಹಜ ಸಮೃದ್ಧಿಯ" 10ನೇ ಸಾವಯವ ಕೃಷಿಕರ ಬಳಗದ ಅರ್ಥಪೂರ್ಣಸಭೆ, ಜನವರಿ 6, 2002ನೇ ಭಾನುವಾರ, ದೇವನಹಳ್ಳಿಯ ಹೊರವಲಯದಲ್ಲಿರುವ ರಮೇಶ್‌ರವರ ತೋಟದಲ್ಲಿ ನಡೆಯಿತು. ಸಾವಯವ ಕೃಷಿಕರ ಭೇಟಿ ಹೊಸ ವರ್ಷವನ್ನು ಒಂದು ವಿಶಿಷ್ಟರೀತಿಯಲ್ಲಿ ಸ್ವಾಗತಿಸಿದಂತಿತ್ತು. ನೀರು ಕುಡಿಯಲು, ಊಟ ಮಾಡಲು ನೀಡಿದ ಮಣ್ಣಿನ ತಟ್ಟೆಗಳು ಈಡೀ ವಾತಾವರಣವೇ ಸಾವಯವ ತತ್ವ ಮತ್ತು ಸತ್ವಗಳನ್ನು ಎತ್ತಿ ತೋರುವಂತೆ ಮಾಡಿದ್ದವು.

- ಅಕ್ಟೋಬರ್ 28ರಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಹಾಸನ ಘಟಕದ ವತಿಯಿಂದ ಪರಿಸರ ಪ್ರಿಯ ಕೃಷಿಕರ 38ನೇ ಸಮಾರಂಭವು ಆಲೂರು ತಾಲ್ಲೂಕಿನ ಹಸಗನೂರಿನ ಹೆಚ್.ಎನ್. ಧರ್ಮಲಿಂಗಂ ಅವರ ತೋಟದಲ್ಲಿ ನಡೆಯಿತು. ಈ ಸಮಾರಂಭಕ್ಕೆ ಶ್ರಿ ಎ.ಪಿ. ಚಂದ್ರಶೇಖರ್‌ರವರು ಅತಿಥಿಗಳಾಗಿ ಬಂದು, ಕೃಷಿಯಲ್ಲಿ ತಮ್ಮ ಅನುಭವವನ್ನು ರೈತರೊಂದಿಗೆ ಹಂಚಿಕೊಂಡರು ಮತ್ತು ಎನ್. ಮೃತ್ಯುಂಜಯಪ್ಪನವರು ವಾಹನಗಳಿಗೆ ತೆಂಗಿನ ಎಣ್ಣೆಯ ಬಳಕೆ ಕುರಿತು ವಿವರಿಸಿದರು.

ಸೃಷ್ಟಿ ಸನ್ಮಾನ ಸಮಾರಂಭ ಮತ್ತು ಹನಿಬೀ ಸಭೆ

ಕಳೆದ ಫೆಬ್ರವರಿ 23, 2002 ರಂದು ಅಹಮದಾಬದಿನ ಐಐಎಮ್ (Indian Institute of Management) ನಲ್ಲಿ ಹನಿಬೀ ಬಳಗದ ಸಭೆ ಮತ್ತು 'ಸೃಷ್ಟಿ' ಸನ್ಮಾನ ಸಮಾರಂಭ ನಡೆಯಿತು. ಈ ಸಭೆಯಲ್ಲಿ ಹನಿಬೀ (ಆಂಗ್ಲ) ಪತ್ರಿಕೆಯ ಸಹೋದರ ಪತ್ರಿಕೆಗಳಾದ ಹಿತ್ತಲಗಿಡ (ಕನ್ನಡ), ತೆನೆಟಿಗ (ತೆಲುಗು), ಸುಜ್‌ಬುಜ್ (ಹಿಂಧಿ), ಲೋಕಸರವಾಣಿ (ಗುಜರಾತಿ), ನಾಮ್‌ವಾಜಿ ವೆಲನ್‌ಮನಿ (ತಮಿಳು) ಮತ್ತು ಕೊಲಾಭಾಲ್ (ಪಂಜಾಬಿ) ಪತ್ರಿಕೆಗಳ ಬೆಳವಣಿಗೆಗಳ ಬಗ್ಗೆ ಮತ್ತು ತಳಮಟ್ಟದ ಶೋಧಕರ ಹುಡುಕಾಟದ ಸ್ಪರ್ಧೆಯನ್ನು ಇನ್ನಷ್ಟು ವ್ಯವಸ್ಥಿತಗೊಳಿಸುವ ಬಗ್ಗೆ ಚರ್ಚೆ ನಡೆಯಿತು. ಇದೇ ಸಂದರ್ಭದಲ್ಲಿ ತಳಮಟ್ಟದ ರೈತರಿಗೆ, ರೈತ ಮಹಿಳೆಯರಿಗೆ ಮತ್ತು ಬುಡಕಟ್ಟು ಜನಾಂಗದವರಿಗೆ 'ಸೃಷ್ಟಿ' ಸನ್ಮಾನ ಮಾಡಲಾಯಿತು.

'ಅನುಶೋಧನೆ ಮತ್ತು ಸೂಕ್ತ ತಂತ್ರಜ್ಞಾನ' ಬಗೆಗಿನ ಆಫ್ರಿಕಾದ ಸಮ್ಮೇಳನ

"ವಿಶ್ವ ಭೌದ್ಧಿಕ ಸಂಪತ್ತಿನ ಸಂಸ್ಥೆ" (World Intellectual Property Organisation) ಕಳೆದ ಫೆಬ್ರವರಿ 27 ಮತ್ತು 28 ರಂದು ಆಫ್ರಿಕಾ ಖಂಡದ ಒಂದು ಪುಟ್ಟ ದೇಶ 'ಲೆಸಾತೊ' ನಲ್ಲಿ 'ಅನುಶೋಧನೆ ಮತ್ತು ಸೂಕ್ತ ತಂತ್ರಜ್ಞಾನ'ದ ಬಗ್ಗೆ ಪ್ರಾದೇಶಿಕ ಮಟ್ಟದ ಸಮ್ಮೇಳನ ಏರ್ಪಡಿಸಿತ್ತು. ಬೌದ್ಧಿಕ ಸಂಪತ್ತು ಮತ್ತು ತಂತ್ರಜ್ಞಾನ ವರ್ಗಾವಣೆಗಳಿಗೆ ಒತ್ತು ಕೊಟ್ಟು ಆಫ್ರಿಕಾ ದೇಶಗಳಿಗೆ ಹೊಂದಿಕೆಯಾಗುವಂತಹಾ ಸೂಕ್ತ ತಂತ್ರಜ್ಞಾನಗಳ ಅನುಶೋಧನೆಗಳನ್ನು ಪ್ರೋತ್ಸಾಹಿಸುವ ಬಗ್ಗೆ ಈ ಸಮ್ಮೇಳನದಲ್ಲಿ ದೀರ್ಘ ಚರ್ಚೆ ನಡೆದಿರುತ್ತದೆ. ಈ ಸಮ್ಮೇಳನದಲ್ಲಿ 'ಹನಿ ಬೀ ಜಾಲ' ನಡೆಸುತ್ತಿರುವ ಪ್ರಯೋಗಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸುವಂತೆ ಸಂಪಾದಕ ಡಾ. ಪ್ರಕಾಶ್ ಕಮ್ಮರಡಿಯವರನ್ನು ಆಹ್ವಾನಿಸಲಾಗಿದ್ದು, ಇದು ಹಿತ್ತಲಗಿಡ ಬಳಗಕ್ಕೆ ನೀಡಿದ ದೊಡ್ಡ ಗೌರವವಾಗಿರುತ್ತದೆ.

ಬಾಂಗ್ಲಾದ 'ಜೀವ ವೈವಿದ್ಯದ ಬಗೆಗಿನ ಪ್ರಾದೇಶಿಕ ಮಟ್ಟದ ವಿಚಾರ ಗೋಷ್ಠಿ'

ದಿನಾಂಕ 6-8, ಏಪ್ರಿಲ್ 2002ರ ಅವದಿಯಲ್ಲಿ ಡಾ. ಫರಹದ್‌ರ 'ಯುಬಿನಿಗ್' (UBINIG) ಸಂಸ್ಥೆ ಮತ್ತು ಅವರ ನೇತೃತ್ವದ "ಆಹಾರ, ಪರಿಸರ ಮತ್ತು ಸಂಸ್ಕೃತಿಗಾಗಿ ದಕ್ಷಿಣ ಏಶಿಯಾ ಜಾಲ" (South Asian Network for Food. Ecology and Culture - SANFEC) ಒಟ್ಟು ಸೇರಿ ವೇಲಿನ ಕಾರ್ಯಾಗಾರವನ್ನು ಬಾಂಗ್ಲಾದ ನಯಾಕೃಷಿ ಆಂದೋಲನದ ಮೂಲ ಕೇಂದ್ರವಿರುವ ಷಂಗೈಲ್ ಜಿಲ್ಲೆಯಲ್ಲಿ ಏರ್ಪಡಿಸಿರುತ್ತವೆ. ಭಾರತ ಉಪಖಂಡದ ಅಮೂಲ್ಯ ಸಂಪನ್ಮೂಲವಾಗಿರುವ ಜೀವ ವಿಭಿಧತೆಯನ್ನು ಸಂರಕ್ಷಿಸುವುದು ಮಾತ್ರವಲ್ಲ ಆ ಮೂಲಕ ಬಡಜನರ ಜೀವನ ಭದ್ರತೆ ಮತ್ತು ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸುವ ವಿಚಾರಗಳ ಬಗ್ಗೆ ಗಂಭೀರ ಚರ್ಚೆ ನಡೆದಿರುತ್ತದೆ. ಭಾರತ ಸೇರಿದಂತೆ ಶ್ರೀಲಂಕಾ, ಪಾಕಿಸ್ತಾನ, ನೇಪಾಳ, ಬಾಂಗ್ಲಾ ಹೀಗೆ ಉಪಖಂಡದ ಎಲ್ಲಾ ರಾಷ್ಟ್ರಗಳಲ್ಲಿ ಈ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆಸುತ್ತಿರುವ ಹಲವರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಈ ನಿಟ್ಟಿನಲ್ಲಿ ಮತ್ತಷ್ಟು ಒಟ್ಟಾಗಿ ಕೆಲಸ ಮಾಡಬೇಕು ಹಾಗೇ SANFEC ಧ್ಯೇಯಗಳನ್ನು ಉಪಖಂಡದಲ್ಲಿ ಗಟ್ಟಿ ಮಾಡಬೇಕೆನ್ನುವ ತೀರ್ಮಾನಕ್ಕೆ ಈ ಸಂದರ್ಭದಲ್ಲಿ ಬರಲಾಯಿತು. ಈ ಕಾರ್ಯಾಗಾರದಲ್ಲಿ ಮಲೆನಾಡ ಪ್ರಾಂತ್ಯದಲ್ಲಿ ಮಹಿಳೆಯರು ತಮ್ಮ ಹಿತ್ತಲುಗಳಲ್ಲಿ ಸಂರಕ್ಷಿಸಿಕೊಂಡು ಬಂದಿರುವ ಜೀವ ವಿವಿಧತೆಯ ಬಗೆಗಿನ ಒಂದು ಅಧ್ಯಯನದ ವಿವರವನ್ನು ಪತ್ರಿಕೆ ಸಂಪಾದಕರು ಹಂಚಿಕೊಂಡಿರುತ್ತಾರೆ.

ಪ್ರತಿಕ್ರಿಯೆ

ಶ್ರೀ ಗೋಪಾಲ ಕೃಷ್ಣ ಅವರ, ಮನೆಯಲ್ಲಿ ಕಣಜಗಳ ಕಾಟ ತೀವ್ರವಾಗಿದೆಯಂತೆ, ಅವುಗಳನ್ನು ಮನೆಯಿಂದ ಹೊರಗೆ ಓಡಿಸುವ ಸುಲಭ ಉಪಾಯಗಳು ಏನಾದರು ಇರುವುದೆ ಎಂದು ಪತ್ರ ಬರೆದಿದ್ದಾರೆ. ಈ ಸಮಸ್ಯೆಗೆ ಪರಿಹಾರಗಳನ್ನು ಅಥವಾ ನೀವು ನಿಮ್ಮ ಮನೆಯಲ್ಲಿ ಕಣಜ ಓಡಿಸಲು ಮಾಡಿದ ತಂತ್ರವನ್ನು ಬರೆದು ಕಳುಹಿಸುವಿರಾ?

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಪಟ್ಟನಾಯಕನ ಹಳ್ಳಿ ಸರೋಜಮ್ಮ ಅವರು ತಮ್ಮ ಮನೆಯ ಕಣಜ ಓಡಿಸಲು ಲಕ್ಕಿಸೊಪ್ಪಿನ (*Vitex nugundo*)ನ ಹೊಗೆ ಹಾಕಿ ಕಿಟಕಿ ಬಾಗಿಲು ತೆಗೆದು, ಮನೆಯವರೆಲ್ಲಾ ಒಂದೆರೆಡು ತಾಸು ಹೊರಗೆ ಇದ್ದರಂತೆ. ಈ ಪದ್ಧತಿಯಿಂದ ಕಣಜಗಳು ಹೋದವಾದರು ಮತ್ತೆ ಒಂದೆರೆಡು ತಿಂಗಳ ನಂತರ ಅವುಗಳ ಹಾವಳಿ ಹೆಚ್ಚಾಯಿತೆನ್ನುವುದು ಸರೋಜಮ್ಮನವರ ಅನುಭವ.

ತುಮಕೂರು ಜಿಲ್ಲೆಯ ಹನುಮನ ಪಾಳ್ಯ ಗ್ರಾಮದ ಶ್ರೀ ಗೋವಿಂದಗೌಡರ ಅಡಿಕೆ ತೋಟದಲ್ಲಿ ಅಳಿಲುಗಳ ಕಾಟ ತೀವ್ರವಾಗಿದೆಯಂತೆ. ಹನಿ ನೀರಾವರಿಯ ಪೈಪುಗಳನ್ನು ಕತ್ತರಿಸುತ್ತಿರುವ ಅಳಿಲುಗಳ ಸಮಸ್ಯೆ ಅವರನ್ನು ಕಂಗಾಲಾಗಿಸಿದೆಯಂತೆ, ಪರಿಹಾರಕ್ಕಾಗಿ ಹಿತ್ತಲಗಿಡದ ಸಹಾಯ ಹಸ್ತ ಬಯಸಿದ್ದಾರೆ. ಇದಕ್ಕೆ ತಮ್ಮಿಂದ ಏನಾದರೂ ಪರಿಹಾರ ಇದೆಯೇ?

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)
ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಮಟ್ಟದ ತೃತೀಯ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ನೇತೃತ್ವವನ್ನು ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ವಿಭಾಗದ (Department of Scientific and Industrial Research) ಕಾರ್ಯದರ್ಶಿಗಳಾದ ಡಾ. ಆರ್. ಎ. ಮಶೇಲ್ಕರ್ ರವರು ವಹಿಸಿಕೊಂಡಿರುತ್ತಾರೆ. ಈ ಪ್ರತಿಷ್ಠಾನವು ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುತ್ತದೆ. ಈ ಪ್ರತಿಷ್ಠಾನದ ಮೂಲ ಉದ್ದೇಶ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು-ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 5,000ದ ಐನೂರು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೂ ಅಷ್ಟೇ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿಯಲ್ಲಿ ಪ್ರಮುಖ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಸಾಮಾನ್ಯ ಜನಸಮುದಾಯ, ತಮ್ಮ ಕೃಷಿ ಕಸುಬು ಪರಿಸರ, ಜೀವ ವೈವಿಧ್ಯತೆ ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ದ್ವಿತೀಯ ವಾರ್ಷಿಕ ಸ್ಪರ್ಧೆಗೆ ಪ್ರವೇಶ ಕಳುಹಿಸಲು ಡಿಸೆಂಬರ್ 31, 2002ರವರೆಗೆ ಅವಕಾಶವಿದೆ.

ಪ್ರವೇಶ ಪತ್ರ ಕಳುಹಿಸಬೇಕಾದ ವಿಳಾಸ:

Prof. Anil K. Gupta, Executive Vice Chairperson, National Innovation Foundation and Professor, Indian Institute of Management, Ahmedabad - 380 015, Gujarat, e-mail: anil@nifindia.org

or

National Co-ordinator, National Innovation Foundation, Satellite complex, Bangalow No.1, Premchand Nagar Road, Ahmedabad - 380 015, Gujarat, e-main: campaign@nifindia. org

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:

ಡಾ। ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು–೫೬೦ ೦೬೫

ದೂರವಾಣಿ: 3637002 (O), 8560267 (R)

(ಇಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)

ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು

ಕರ್ನಾಟಕದಿಂದ - ಹಿತ್ತಲಗಿಡ ಬಳಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, Honey Bee Network, Indian Institute of Management, Ahmedabad

ಪತ್ರಿಕೆ ನೊಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ಪಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)
ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ "ಸಂಪಾದಕರು, ಹಿತ್ತಲಗಿಡ, ಬೆಂಗಳೂರು" ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...
....
....
....

ವಿಳಾಸ
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph: 080-3637002, 8560267 (R)
email: hittalu@bgl.vsnl.net.in and prakashtnk@yahoo.com

Printed by Sri. S. Sridhar, Published by Smt. K. Meenakshi (Owner). Printed at "Navbharath Enterprises" No.10, Sirur Park `B' Street, ÍSheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi